ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

6-00 P.M

(2) ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಇದು ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ಕರ್ನಾಟಕ ಎಕ್ಸೈಸ್ ಆಕ್ಟ್ 1965 ಇದನ್ನು ಇವತ್ತು ತಿದ್ದುಪಡಿ ಮಾಡುವ ಉದ್ದೇಶ ಏನು ಬಾಟ್ಲಿಂಗ್ ಕಾಂಟ್ರಾಕ್ಟಿಗೆ ಅವಕಾಶ ನಮ್ಮ ಕಾನೂನು ಪ್ರಕಾರ ಕೊಟ್ಟಿತು, ಅದನ್ನು ಆ ವಾಯದೆಗೆ ಮೊದಲು ಖಾಸಗಿಯಾಗಿ ಕೊಟ್ಟಿದ್ದನ್ನು ರದ್ದು ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದೀವೆ. 30ನೇ ತಾರೀಖು ಜೂನ್ 1993ರ ಅಂತ್ಯಕ್ಕೆ ಅದನ್ನು ರದ್ದುಪಡಿಸಲಾಗಿದೆ ಮತ್ತು ಈ ಕಾರ್ಯಭಾರವನ್ನು ಮೈಸೂರು ಶುಗರ್ ಮಿಲ್ ಮತ್ತು ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ ಈ ಎರಡು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ 1ನೇ ತಾರೀಖು ಜುಲೈ 1993ರಂದು ವಹಿಸಿಕೊಟ್ಟಿದ್ದೇವೆ. ಒಂದು ವ್ಯವಹಾರವನ್ನು ಇವತ್ತು ಸಂವಿಧಾನ ಪ್ರಕಾರ ಅವರಿಗೆ ಈ ವಿಧೇಯಕ ಮೂಲಕ ನಾವು ಒಪ್ಪಿಸಬೇಕೆಂದು ಈ ವಿಧೇಯಕವನ್ನು ತರಲಾಗಿದೆ.

+ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) : ಇದಕ್ಕೆ ಪೂರಕವಾಗಿ ನಾನು ಹೇಳುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಒಂದು ವಿಧೇಯಕವನ್ನು ಏನು ಮಂಡಿಸಿದ್ದಾರೆ, ಅದು ಈ ಸಭೆ ಯಾವುದೇ ದೃಷ್ಟಿಯಿಂದ ಒಪ್ಪಲಾರದಂಥ ಒಂದು ವಿಧೇಯಕ. ಒಂದು ಹೊಸ ದಾಖಲೆಯನ್ನೇ ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಈ ದಿಸೆಯಲ್ಲಿ ದಾಖಲಿಸದೆ ಎಂದು ಹೇಳಿದರೆ ತಪ್ಪಾಗಲಾಗದು. ಅವರು ಪೂರ್ಣವಾದಂಥ ವಿಚಾರಗಳನ್ನು ಪ್ರಾಸ್ತಾವಿಕ ಭಾಷಣದಲ್ಲಿ ಹೇಳದೇ ಇರುವುದರಿಂದ ಕೆಲವು ವಿಚಾರಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಮ್ಮ ಕೈಕೆಳಗೆ ಈ ರಾಜ್ಯದಲ್ಲಿ ಇರುವಂಥ ಕಾನೂನು ಇಲಾಖೆ ಹೇಗೆ ತಮ್ಮ ಕರ್ತವ್ಯಚ್ಯುತಿಯಲ್ಲಿ ತೊಡಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಾನು ಬೆಳಿಗ್ಗೆ ವಿವರಗಳನ್ನು ಪಡೆಯಲಿಕ್ಕೆ ಎಂದು ಸಂಬಂಧಪಟ್ಟವರಲ್ಲಿಗೆ ಹೋದಾಗ, ಈಗ ಬರುತ್ತಿದೆ ಅರ್ಧಂಬರ್ಧ ತಿದ್ದುಪಡಿ ವಿಧೇಯಕ. ಸನ್ಮಾನ್ಯ ಅಧ್ಯಕ್ಷರೇ, ಇದರ ಕತೆಯನ್ನು ಹೇಳುವುದಾದರೆ, ಹೇಗೆ ನಮ್ಮ ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಇರುವಂಥ ಅಧಿಕಾರಿಗಳು ತಮ್ಮ ಕೆಲಸ ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಕೈಗನ್ನಡಿಯಾಗಿದೆ.

ನಾನು ಕೇವಲ ಮುಖ್ಯಮಂತ್ರಿಗಳನ್ನು ದೂರುವುದಿಲ್ಲ. ಅವರು ಎಲ್ಲವನ್ನೂ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲ. ತಮಗೆ ಸಹಾಯ ಮಾಡುವುದಕ್ಕೆ ಕಾನೂನು ಇಲಾಖೆ ಇದೆ ಆಡಳಿತ ಇಲಾಖೆ ಇದೆ. ಇದನ್ನು ಸ್ವಲ್ಪ ವಿವರವಾಗಿ ಹೇಳಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ 1993ನೇ ಇಸವಿ ಮೇ 10ರಂದು ಒಂದು ಸುಗ್ರೀವಾಜ್ಞೆಯನ್ನು ರಾಜ್ಯ ಸರ್ಕಾರದವರು ಹೊರಡಿಸುತ್ತಾರೆ. ತಮಗೆ ಗೊತ್ತಿರುವ ಹಾಗೆ, ಈ ಸದನ

ಸೇರಿದ ಆರು ವಾರದೊಳಗೆ ಅದರ ಪ್ರತಿಯನ್ನು ಪುನಃ ಸದನದ ಮುಂದೆ ಇಡಬೇಕು. ಆರು ತಿಂಗಳ ಒಳಗೆ ಸದನ ಏನಾದರೂ ಆರ್ಡಿನೆನ್ಸ್‌ನ್ನು ರಿಪೀಲ್ ಮಾಡಿ ಶಾಸನವನ್ನು ಮಾಡದೇ ಇದ್ದರೆ ಅದು ಊರ್ಜಿತವಾಗತಕ್ಕದ್ದಲ್ಲ. ಈ ಒಂದು ಸುಗ್ರೀವಾಜ್ಞೆಯನ್ನು 27ನೇ ಆಗಸ್ಟಲ್ಲಿ ಇಟ್ಟರು. ಇದು ಆರು ತಿಂಗಳ ಒಳಗೆ ವಿಧೇಯಕದ ರೂಪದಲ್ಲಿ ಒಪ್ಪಿಗೆ ಪಡೆದು ಶಾಸನ ಆಗಬೇಕಿತ್ತು. ಅದು ಆಗಲಿಲ್ಲ. ತದನಂತರ ಪುನಃ ಈ ಒಂದು ಸುಗ್ರೀವಾಜ್ಞೆಯನ್ನು ಮತ್ತೊಂದು ಸುಗ್ರೀವಾಜ್ಞೆ ಮುಖಾಂತರ ತಂದು ರಿಪೀಲ್ ಮಾಡಿದರು. ಅದು ಯಾವುದೆಂದರೆ ಆರ್ಡಿನೆನ್ಸ್ ನಂಬರ್ 10 ಆಫ್ 1993. ಇದರ ದಿನಾಂಕ 6.10.93. ಸನ್ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಗಮನಕೊಟ್ಟು ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಧೇಯಕವನ್ನು ಏನು ಮುಖ್ಯಮಂತ್ರಿಗಳು ಸಭೆಯಲ್ಲಿ ಇವತ್ತು ಮಂಡಿಸಿದ್ದಾರೆ, ಇದು ಯಾವತ್ತು ಸದನದಲ್ಲಿ ಮಂಡಿತವಾಯಿತು? When it was introduced? When the Hon'ble Chair gave permission to introduce the Bill?

ಇದು 27ನೇ ತಾರೀಖು ಆಗಸ್ಟ್ 93ರಲ್ಲಿ ಮಂಡಿತವಾಯಿತು. ಇವತ್ತಿನ ದಿವಸ ಸುಗ್ರೀವಾಜ್ಞೆ ಯಾವುದನ್ನು ನಾವು ರಿಪೀಲ್ ಮಾಡಬೇಕಾಗಿದೆ? 6-10-93ರ ಈ ಸುಗ್ರೀವಾಜ್ಞೆಯನ್ನು ಬದಲಾವಣೆ ಮಾಡಿ ವಿಧೇಯಕವನ್ನು ತಂದು ಶಾಸನ ಮಾಡಬೇಕಾಗಿದೆ. ಆದರೆ ನಮ್ಮ ಮುಂದೆ ಇರುವಂಥ ವಿಧೇಯಕ 1993ನೇ ಆಗಸ್ಟ್ 27ನೇ ತಾರೀಖು ಮಂಡಿತವಾದಂಥ ಒಂದು ವಿಧೇಯಕ. ಆ ವಿಧೇಯಕದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ ಯಾತಕ್ಕೋಸ್ಕರ ಮಾಡಿದ್ದೇವೆ ಎಂದು. 1993ರಲ್ಲಿ ಈ ಸುಗ್ರೀವಾಜ್ಞೆಯನ್ನು ಮಾಡಿದ್ದು ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ಮಂಡಿಸಬೇಕಾಗಿದೆ. ಇದರ ಉದ್ದೇಶ ಮತ್ತು ಕಾರಣಗಳ ಹೇಳಿಕೆಯನ್ನು ಇಂಗ್ಲೀಷಿನಲ್ಲಿರುವುದನ್ನು ನಾನು ಓದುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಇಂತಹ ಒಂದು ಮಹತ್ವದ ವಿಷಯ ಚರ್ಚೆಯಾಗುತ್ತಿದೆ. ಯಾರಿಗೂ ಇದರ ಬಗ್ಗೆ ಕಾಳಜಿ ಇಲ್ಲ.

ಶ್ರೀ ಎಚ್. ಏಕಾಂತಯ್ಯ : ಕಾನೂನಿಗೆ ವಿರುದ್ಧವಾದ ರೀತಿಯಲ್ಲಿ, ನಾವು ರೂಪಿಸಿಕೊಂಡಿರುವ ನಿಯಮಾವಳಿಗಳಿಗೆ ವಿರುದ್ಧವಾಗಿ, ಸಂವಿಧಾನಕ್ಕೆ, ಹೇಗೆ ನಿಮ್ಮ ಇಲಾಖೆ ನಡೆಯುತ್ತಿದೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಯಾವ ಒಂದು ಸುಗ್ರೀವಾಜ್ಞೆಯನ್ನು ಇವತ್ತಿನ ದಿವಸ ವಿಧೇಯಕ ರೂಪದಲ್ಲಿ ಶಾಸನ ಮಾಡಿ ಒಪ್ಪಿಗೆ ಪಡೆಯುತ್ತಿದ್ದೇವೆ. ಯಾವುದನ್ನು ರಿಪೀಲ್ ಮಾಡಬೇಕಾಗಿದೆ ಅದು ಇಲ್ಲಿ ಇಲ್ಲವೇ ಇಲ್ಲ. ಇದು ಸುಗ್ರೀವಾಜ್ಞೆ ಬರುವುದಕ್ಕೆ ಮೊದಲು ಅಂದರೆ ಆಗಸ್ಟ್ 27ನೇ ತಾರೀಖು ಏನು ಸದನದಲ್ಲಿ ಮಂಡನೆಯಾಯಿತು, ಆ ವಿಧೇಯಕವನ್ನು ನಾವು ಚರ್ಚೆ ಮಾಡಬೇಕಾಗಿದೆ. ಇದಕ್ಕಿಂತ ಅವಹೇಳನಕರವಾದ ಹಾಗೂ ಅಪಮಾನಕರವಾದಂಥ ಈ ಸದನಕ್ಕೆ ಸಂಬಂಧಪಟ್ಟವರು ಮಾಡಿದಂಥ ಅಪಚಾರ ಏನಿದೆ, ಖಂಡಿತವಾಗಿ ಸರ್ಕಾರಕ್ಕೆ ಏನಾದರೂ ಇದರ ಬಗ್ಗೆ ಗೌರವ ಇದ್ದರೆ, ಅವರ ಮೇಲೆ ಕ್ರಮವನ್ನೂ ತೆಗೆದುಕೊಳ್ಳಬೇಕು.

ಇವತ್ತಿನ ದಿವಸ ಯಾವ ಆಧ್ಯಾದೇಶವನ್ನು ರಿಪೀಲ್ ಮಾಡುವುದು? ನಾನು ಬೆಳಿಗ್ಗೆ ಸಂಬಂಧಪಟ್ಟವರಿಂದ ವಿವರಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದಾಗ, ಈಗ ಅರ್ಧಂಬರ್ಧ ಅಮೆಂಡಮೆಂಟ್ ಬರುತ್ತಿದೆ. 1993ನೇ ಆಗಸ್ಟ್ 27ನೇ ತಾರೀಖು ವಿಧೇಯಕ ಮಂಡನೆಯಾದರೆ, ಏತಕ್ಕೋಸ್ಕರ ಇದು ಚರ್ಚೆಗೆ ಬರಲಿಲ್ಲ ಎಂಬುದು ಬೇರೆ ಪ್ರಶ್ನೆ. ಆದರೆ ಇವತ್ತಿನ ದಿವಸ 27ನೇ ತಾರೀಖು ಆಗಸ್ಟಲ್ಲಿ ಏನು ಮಂಡನೆ ಮಾಡಿದ್ದಾರೆ, ಆ ವಿಧೇಯಕದ ಮುಖಾಂತರ ಅದನ್ನು ಪ್ರರ್ಯಾಲೋಚನೆ ಮಾಡಬೇಕೆಂದು ಮುಖ್ಯಮಂತ್ರಿಗಳು ತಂದಿದ್ದಾರೆ. ಪರ್ಯಾಲೋಚನೆ ಏತಕ್ಕೋಸ್ಕರ ಮಾಡಬೇಕು ಎಂದರೆ, ಅಕ್ಟೋಬರ್ 6ನೇ ತಾರೀಖು ಏನು ಆಧ್ಯಾದೇಶವಾಯಿತು, ಅದನ್ನು ರಿಪೀಲ್

ಮಾಡುವುದಕ್ಕಾ? ಇದಕ್ಕಿಂತ ಹಾಸ್ಯಾಸ್ಪದವಾದ ರೀತಿಯಲ್ಲಿ ಸರ್ಕಾರ ಆಡಳಿತ ಮಾಡಿದ್ದನ್ನು ನಾನು ಎಂದೂ ಕಂಡಿಲ್ಲ. ನನಗೆ ಗೊತ್ತಿದೆ, ನಾಳೆ ಅಥವಾ ನಾಡದ್ದರೊಳಗೆ ಆರು ವಾರಗಳ ಅವಧಿ ಕಳೆಯುತ್ತದೆ. 6-10-93ರಲ್ಲಿ ತಾವು ಅಧ್ಯಾದೇಶವನ್ನು ಹೊರಡಿಸಿದ್ದೀರಿ, ಅದು ಜಾರಿಯಲ್ಲಿ ಇರುವುದಕ್ಕೆ ಕೇವಲ ಆರು ವಾರ ಮಾತ್ರ ಇದೆ. ಅಧ್ಯಕ್ಷರೇ, ಇವತ್ತಿನ ದಿವಸ ತಾವು ಯಾವುದೇ ವಿಧವಾದಂಥ ಪ್ರತಿಷ್ಠೆಗೆ ಒಳಗಾಗದೆ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಿಯಮ 106ರ ಪ್ರಕಾರ ತಮಗೆ ಅಧಿಕಾರ ಇದೆ. ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು ಕಾನೂನು ಪ್ರಕಾರವಾದಂಥ ವಿಧೇಯಕವನ್ನು ನಮ್ಮ ಮುಂದಿಡಬೇಕಾಗಿದೆ.

ಸನ್ಮಾನ್ಯ ಅಧ್ಯಕ್ಷರೇ, ಇನ್ನೊಂದು ಅಸಂಗತವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏನು 6-10-93ರಲ್ಲಿ ಅವರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ, ಅದರಲ್ಲಿ ಏನು ಮಾಡಿದ್ದಾರೆ? ಅದರಲ್ಲಿ you have already repealed the old ordinance. ಈಗಾಗಲೇ ಅಧ್ಯಾದೇಶದ ಮುಖಾಂತರ ಯಾವ ಒಂದು ಆರ್ಡಿನೆನ್ಸ್‌ನ್ನು ರಿಪೀಲ್ ಮಾಡಿದ್ದಾರೋ, ಈಗ ಪುನಃ ಅಧ್ಯಾದೇಶವನ್ನು ವಿಧೇಯಕ ಮೂಲಕ ರಿಪೀಲ್ ಮಾಡುವುದಕ್ಕೆ ಹೊರಟರೆ ಇದಕ್ಕಿಂತ ಹಾಸ್ಯಸ್ಪದ ವಿಚಾರ ಬೇರೆ ಇಲ್ಲ. ಈಗ ಆರ್ಡಿನೆನ್ಸ್‌ನಲ್ಲಿ ಹೇಳಿದ್ದಾರೆ "The Karnataka Excise (Amendment) Ordinance 1993 'Karnataka Ordinance 6 of 1993) is hereby repealed by Section 5 of the Ordinance."

ಅದಕ್ಕೆ ಇವತ್ತು ಏನು ವಿಧೇಯಕವನ್ನು ತಂದಿದ್ದಾರೆ, ಅದರಲ್ಲಿ ಏನು ಹೇಳುತ್ತಿದ್ದಾರೆ ಎಂದರೆ ಮತ್ತೆ ಅದೇ ವಿಷಯ. "The Karnataka Excise Amendment Ordinance Section 5. Repeals & Savings. The Karnataka Excise Amendment Ordinance 1993 (Karnataka Ordinance 6 of 1993) is hereby repealed." So, they are repealing an Ordinance which is already repealed by an Ordinance, again by means of Bill.

Sri K.H. Ranganath : For some reason, if that Ordinance cannot be repealed by the amending Bill, ಮತ್ತೊಂದು ಆರ್ಡಿನೆನ್ಸ್ ತರುವುದಕ್ಕೆ ಪ್ರಾವಿಷನ್ ಇರುತ್ತದಲ್ಲ. ಆ ಪ್ರಾವಿಷನ್ ಇದ್ದರೆ, ಹೌಸ್ ಮೀಟ್‌ಆದಾಗ, ಸಬ್ಸಿಕ್ವೆಂಟ್ ಆರ್ಡಿನೆನ್ಸ್ ಏನು ಬರುತ್ತದೆ, ಅದನ್ನು ರೀಪ್ಲೇಸ್ ಮಾಡಿ, ಒಂದು ಬಿಲ್ ಬರುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಹೌದು, ಅದೂ ಆಗಲಿಲ್ಲ. ತಾವು ಸಬ್ಸಿಕ್ವೆಂಟ್ ಆಗಿರತಕ್ಕಂಥ ಆರ್ಡಿನೆನಸ್ನು ರಿಪೀಲ್ ಮಾಡುವುದಕ್ಕೆ ತಾವು ತಂದಿದ್ದರೆ, ತಾವು ಹೇಳುವ ಮಾತನ್ನು ಒಪ್ಪುತ್ತಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್ : ಒಂದು ಆರ್ಡಿನೆನ್ಸ್ ತರುತ್ತೇವೆ, ಅದನ್ನು ಬಿಲ್ ಮುಖಾಂತರ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ, ಎರಡು ಸದನಗಳೂ ಇಲ್ಲದೇ ಹೋದಾಗ, ಇನ್ನೊಂದು ಆರ್ಡಿನೆನ್ಸ್‌ನ್ನು ತಂದಿರುತ್ತೇವೆ. ಆ ಆರ್ಡಿನೆನ್ಸ್ ಹೌಸ್ ಸಭೆ ಸೇರಿದಾಗ, ಅದನ್ನು ರೀಪ್ಲೇಸ್ ಮಾಡುವುದಕ್ಕೆ ಬಿಲ್ ಬರುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಹಿರಿಯ ಸಚಿವರು ಏಕೆ ಈ ರೀತಿ ಹೇಳುತ್ತಾರೋ ಗೊತ್ತಿಲ್ಲ. ನಿಜವಾಗಿಯೂ ಸಹ, ನೀವು ಆಗಲೇ ಹೇಳಿದಿರಲ್ಲ. ಬೈರೇಗೌಡರೇ, ನಾನು ಅದೇ ಮಾತನ್ನು ರಿಪೀಟ್ ಮಾಡಬೇಕಾಗುತ್ತದೆ. ಆಯಿತು, ನೀವು ಅದನ್ನು ಮಾಡಿ, ನಮ್ಮದೇನೂ ತಕರಾರು ಇಲ್ಲ. ಇವತ್ತೂ ನೀವು ಸರಿ ಎಂದು ಹೇಳುವುದಿದ್ದರೆ, ನಮ್ಮದೇನೂ ತಕರಾರು ಇಲ್ಲ, ಆಮೇಲೆ

ನೋಡೋಣ. ನಾನು ಪುನಃ ಹೇಳುತ್ತಿದ್ದೇನೆ. ನಾನು ಹೇಳಿದಂಥ ವಿಚಾರಗಳನ್ನು ಎಷ್ಟರಮಟ್ಟಿಗೆ ಫಾಲೋ ಮಾಡಿದ್ದಾರೆ ಎಂದು. ನಾನು ಆಗಲೇ ಹೇಳಿದೆ, ಯಾವುದು ಆರ್ಡಿನೆನ್ಸ್ ಆಯಿತು, in october it is repealed by means of an Ordinance. ಯಾವುದನ್ನು ರಿಪೀಲ್ ಮಾಡಿದ್ದಾರೆ, ಆ ಸುಗ್ರೀವಾಜ್ಞೆಯನ್ನು ಈ ವಿಧೇಯಕದ ಮುಖಾಂತರ ತಾವು ಮಾಡುವಂಥ ಅವಶ್ಯಕತೆ ಇದೆಯೇ. ಈ ಸಾರಿ ವಿಧೇಯಕ ಯಾವ ರೀತಿ ಇರಬೇಕಾಗಿತ್ತು ಎಂದು ನನಗನಿಸುತ್ತದೆಂದರೆ, ಯಾವುದು 2ನೇ ಆರ್ಡಿನೆನ್ಸ್ ಕೊಟ್ಟಿದ್ದರೋ, ಆ ಆರ್ಡಿನೆನಸ್ನು ರೀಪ್ಲೇಸ್ ಮಾಡುವಂಥ ವಿಧೇಯಕವಾಗಬೇಕಾಗಿತ್ತು. ಅದಕ್ಕೆ ಬದಲಾಗಿ, ಯಾವ ಆರ್ಡಿನೆನ್ಸನ್ನು ಯಾವ ಎರಡನೇ ಆರ್ಡಿನೆನ್ಸ್ ಮುಖಾಂತರ, ಮೊದಲನೇ ಆರ್ಡಿನೆನ್ಸನ್ನು ರಿಪೀಲ್ ಮಾಡಿದರು, ಆ ಆರ್ಡಿನೆನ್ಸನ್ನು ರಿಪೀಲ್ ಮಾಡುವಂಥ ಸಾಹಸವನ್ನು ದುಸ್ಸಾಹಸವನ್ನು ಮಾನ್ಯ ಸರ್ಕಾರದವರು ಮಾಡಿದ್ದಾರೆಂದು ಹೇಳಿದರೆ, ತಪ್ಪಾಗಲಿಕ್ಕಿಲ್ಲ. ಇನ್ನೊಂದು ಮಾತನ್ನು ಹೇಳುತ್ತಿದ್ದೇನೆ, ಇವತ್ತಿನ ದಿವಸ, ಏನು ಬಿಲ್ ಬಂದಿದೆ, ಇದು ಎಂದು ಮಂಡಿತವಾಯಿತು. ಇದು ಇವತ್ತು ಮಂಡಿತವಾಗಲಿಲ್ಲ, ಈ ವಿಧೇಯಕ ಮಂಡಿತವಾಗಿದ್ದು 1993ನೇ ಇಸವಿ ಆಗಸ್ಟ್ 27ನೇ ತಾರೀಖು. ತದನಂತರ, ಅನೇಕ ವಿಚಾರಗಳು ಬಂದಿವೆ. ಅದು ಆಮೇಲೆ ಪ್ರಶ್ನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ತಿದ್ದುಪಡಿ ತಂದಿದ್ದೇವೆ. we have already brought an amendment. Your letter of objection is correct. The first objection is not correct. ಆ ತಪ್ಪನ್ನು ಸರಿ ಮಾಡುವುದಕ್ಕೆ, we have brought an amendment to this Bill. It is already there. We have circulated it.

Sri H. Ekanthaiah : Even then, it is not correct. I fully agree with the Hon'ble Minister for PWD but it is not so here. ತಾವು ಹೇಳುವಂಥ ವಿಚಾರ, ಇಲ್ಲಿಯ ವಸ್ತುಸ್ಥಿತಿಗೆ ಅನುಗುಣವಾಗಿದ್ದರೆ, ನನ್ನ ಒಪ್ಪಿಗೆಯೂ ಇದೆ. ನನ್ನ ಅನುಮೋದನೆಯೂ ಇದೆ. ಆದರೆ, ಅದು ಆಗಲಿಲ್ಲ. ಇದು ಒಂದು ಪ್ರಶ್ನೆ. ಇದನ್ನು ಉದ್ದ ಅಥವಾ ಲಂಭಿಸುವುದರ ಮುಖಾಂತರ ನಾನು ಹೆಚ್ಚು ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತಿನದಿವಸ ಈ ವಿಧೇಯಕ ಕಾನೂನು ಪ್ರಕಾರ ಇಲ್ಲದೇ ಇರುವುದರಿಂದ, ಈ ವಿಧೇಯಕವನ್ನು ವಾಪಸ್ಸ ಪಡೆಯಬೇಕು. ಮತ್ತು ಹೊಸ ವಿಧೇಯಕವನ್ನು ಮಂಡಿಸಬೇಕು. ಹೊಸ ವಿಧೇಯಕ, 2ನೇ ಸಾರಿ ಏನು ಸುಗ್ರೀವಾಜ್ಞೆ ಹೊರಡಿಸಿದ್ದಾರೆ, ಅದನ್ನು ರಿಪೀಲ್ ಮಾಡುವುದಕ್ಕೆ ಅವಶ್ಯಕವಾದಂಥ ಕಾನೂನನ್ನು ಹೊಂದಿರಬೇಕು. ಅದಕ್ಕೆ ನಾವು ರೂಲ್ ಮಾಡಿಕೊಂಡಿದ್ದೇವೆ. I would like to know whether there is any amendment with respect to the Explanatory Statement as required by Rule 79 of the Rules of Procedure & Conduct of Business in the Karnataka Legislative Assembly? Have you said anything here? What is said here is, "As the matter was urgent and both Houses of Legislature were not in session, the Karnataka Excise Ordinance of 93 i.e., Karnataka Ordinance 6 of 93 was promulgated.

ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಅಲ್ಲಿಗೇ ಕೈಬಿಡುತ್ತಿದ್ದೇನೆ. ಇವತ್ತೂ ಸಹ ಅವರು ಆಡಳಿತ ಮಾಡಲಿ, ಇದು ಅಕ್ರಮ ಮತ್ತು ಅಸಿಂಧು ಆಗುತ್ತದೆ ಎಂಬ ಮಾತನ್ನು ನಾನು ಸಂಬಂಧಪಟ್ಟವರ ಗಮನಕ್ಕೆ ತರುತ್ತಿದ್ದೇನೆ. ಬೇಕಾದರೆ, ನಾಳೆಯೇ ಅವರು ಬೇರೆ ಬಿಲ್ಲನ್ನು ಇಡಲಿ, ಖಂಡಿತವಾಗಿಯೂ ಸಹ ಅದನ್ನು ಪರಿಗಣನೆ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ ಎಂಬ ಮಾತನ್ನು ಹೇಳುತ್ತೇನೆ. ನಾವೆಲ್ಲರೂ ಸಹ ಇಲ್ಲಿರುವುದು ಕಾನೂನು ಪ್ರಕಾರ, ವಿಧೇಯಕಗಳು ಮಂಡಿತವಾಗಬೇಕು ಮತ್ತು ಅವುಗಳಿಗೆ ಅನುಮೋದನೆಯನ್ನು ಪಡೆಯಬೇಕು ಎಂಬುದರಲ್ಲಿ ನಮಗೆ ಆಸಕ್ತಿ ಇದೆಯೇ

ಹೊರತು ಬೇರೆ ಏನೂ ಇಲ್ಲ. ನಮಗೆ ಗೊತ್ತಿದೆ, ತಾವು ಏನು ಹೇಳಿದರೂ ಸಹ ಈ ವಿಚಾರವಾಗಿ, ಅವರಿಗೆ ಸರಿ ಇದೆ. We will have our own say. Let it be on record.

ಇವೆಲ್ಲಾ ವಿಚಾರಗಳನ್ನು ಹೇಳಿದ ಮೇಲೂ ಸಹ ತಮ್ಮ ತಪ್ಪನ್ನು ತಿದ್ದಿಕೊಳ್ಳದಂಥ ಮೊಂಡು ಸರ್ಕಾರಕ್ಕೆ ಇದ್ದರೆ, ಅದಕ್ಕೆ ನಾವು, ನೀವು ಏನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಂಡನೆ ಮಾಡುವಾಗ ತಪ್ಪು ಮಾಡುವುದಕ್ಕೆ ಹೇಗೆ ಆಗುತ್ತದೆ?

ಶ್ರೀ ಎಚ್. ಏಕಾಂತಯ್ಯ : ಆಯಿತು ಸ್ವಾಮಿ, ನಾನು ಆರ್ಗ್ಯುಮೆಂಟ್ ಮಾಡುವುದಕ್ಕೆ ಇಷ್ಟ ಇಲ್ಲ, ನಾನು ಆರ್ಗ್ಯುಮೆಂಟ್ ಮಾಡಬೇಕಾದರೆ ಕೋರ್ಟ್‌ನಲ್ಲಿ ಮಾಡುತ್ತೇನೆ. ಇಷ್ಟೆಲ್ಲಾ ಹೇಳಿದ ಮೇಲೂ ತಾವು ಕೇಳದೆ ಇದ್ದರೆ ನಾವು ಏನು ಹೇಳೋಣ. ದಯವಿಟ್ಟು ತಾವು ಇವೆಲ್ಲವನ್ನು ತೆಗೆದುಕೊಂಡು ನೋಡಿ. ನಾನು ಹೇಳುವುದರಲ್ಲಿ ತಪ್ಪಿದ್ದರೆ ಕ್ಷಮಾಪಣೆ ಕೇಳುತ್ತೇನೆ. ಸುಮ್ಮನೆ ಏಕೆ? ಮಾನ್ಯ ಅಧ್ಯಕ್ಷರೇ, ಬೇಡ ಸ್ವಾಮಿ, ನಾನು ಹೇಳಿಬಿಡುತ್ತೇನೆ. ನಮ್ಮ ಮಾತು ಹಾಗೂ ನಿಮ್ಮ ಮಾತು ರೆಕಾರ್ಡಿನಲ್ಲಿ ಇರುತ್ತದೆ. ಈ ದೇಶದ ಜನರಿಗೆ ನಾವು ಹೇಳುವುದು ಸರಿಯೋ ನೀವು ಹೇಳುವುದು ಸರಿಯೋ ಆಮೇಲೆ ನೋಡೋಣ. Let it be on record.

SRI HARNAHALLY RAMASWAMY : We don't want this to be a futile exercise. ಒಂದು ಎರಡು ಮಾತು ಹೇಳಿಬಿಟ್ಟರೆ ತಾವು ಒಳ್ಳೆಯದು.

SRI H. EKANTHAIAH : Futile exercise ಸರಿ? ಅದನ್ನು ಹೇಳುವ ಅವಶ್ಯಕತೆಯಿಲ್ಲ. ನಾನು ಬೇರೆ ವಿಚಾರಕ್ಕೆ ಹೋಗುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ತಮಗೆ ಗೊತ್ತಿದೆ ಈ ಒಂದು ಸುಗ್ರೀವಾಜ್ಞೆಗಳನ್ನು ತರುವಾಗ ನಮಗೆ ಅರ್ಜನ್ಸಿ ಮತ್ತು ಎಮರ್ಜನ್ಸಿ ಇರಬೇಕು. ಇದು ನಾವೆಲ್ಲರೂ ಪಾಲಿಸಿಕೊಂಡು ಬಂದಿರತಕ್ಕಂಥ ಸಂಪ್ರದಾಯ. ಕೇವಲ ಈ ರಾಜ್ಯದಲ್ಲಿ ಮಾತ್ರ ಅಲ್ಲ. ಪಾರ್ಲಿಮೆಂಟ್‌ನಲ್ಲೂ ಸಹ ಈ ವಿಚಾರ ಅನೇಕ ಸಾರಿ ಪ್ರಸ್ತಾಪ ಆಗಿದೆ. ನಾನು ಇವತ್ತಿನ ದಿವಸ ಹೊಸದಾಗಿ ಏನನ್ನು ಹೇಳುತ್ತಿಲ್ಲ. ಮಾವಲಂಕರ್‌ರವರು ಲೋಕಸಭಾ ಅಧ್ಯಕ್ಷರು ಏನು ಆಗಿದ್ದರು ಅವರ ಮಾತನ್ನು ನಾನು ಅನುಮತಿ ಕೊಟ್ಟರೆ ಓದುತ್ತೇನೆ. ಈ ಒಂದು ಎಮರ್ಜನ್ಸಿಯೇಲ್ಲದೆ ಅರ್ಜನ್ಸಿ ಇಲ್ಲದೆ ಆರ್ಡಿನೆನ್ಸ್‌ಗಳನ್ನು ತರುವಂತಹ ಪ್ರವೃತ್ತಿ ಏನಿದೆ 'It is undemocratic.' ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇದು ನಮ್ಮ ನಿಮ್ಮದು ಅಲ್ಲ ಸ್ವಾಮಿ, ನಾನು ಇವತ್ತು ಮುಖ್ಯಮಂತ್ರಿಗಳಿಗೆ ಹೇಳುತ್ತಿಲ್ಲ. ಅವತ್ತಿನ ದಿವಸ ಮಾವಲಂಕರ್‌ರವರು ಯಾವ ಒಬ್ಬ ದೊಡ್ಡ ಪ್ರವರ್ತಕ ಎಂದು ಅನಿಸಿಕೊಂಡಿದ್ದಾರೆ, ಅವರು ಪಂಡಿತ ಜವಹರಲಾಲ್ ನೆಹರೂರವರಿಗೆ ಈ ಮಾತನ್ನು ಹೇಳಿದ್ದಾರೆ ಸನ್ಮಾನ್ಯ ಅಧ್ಯಕ್ಷರೇ, ಆ ದಿಸೆಯಲ್ಲಿ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಇವತ್ತಿನ ದಿವಸ ಯಾವ ಅರ್ಜನ್ಸಿ ಮತ್ತು ಎಮರ್ಜನ್ಸಿ ಇತ್ತು? ಒಂದು ಪಕ್ಷ ಎಮರ್ಜನ್ಸಿ ಮತ್ತು ಅರ್ಜನ್ಸಿ ಇದ್ದರೆ ಮೊದಲನೇ ಸುಗ್ರೀವಾಜ್ಞೆಯನ್ನು ತಾವು ಏನು 1993ರ ಮೇನಲ್ಲಿ ತೆಗೆದುಕೊಂಡು ಬಂದಿದ್ದೀರಿ, ಏತಕೋಸ್ಕರ ಆ ವಿಧೇಯಕವನ್ನು ಪರಿವರ್ತನೆ ಮಾಡಿ ಆ ವಿಧೇಯಕವನ್ನು ಇಲ್ಲಿ ತಂದು ಜಾರಿ ಮಾಡಲಿಲ್ಲ? ಇದರ ಅರ್ಥ ಏನು ಸೂಚಿಸುತ್ತದೆ ಇವರಿಗೆ ಅರ್ಜನ್ಸಿ ಇರಲಿಲ್ಲ ಎಮರ್ಜನ್ಸಿ ಇರಲಿಲ್ಲ ಬೇರೆ ಯಾವುದೋ ಕಾರಣಕೋಸ್ಕರ ಇದನ್ನು ಮಾಡಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ ಇವತ್ತಿನ ದಿವಸ ಏನು ಮೊದಲನೆಯ ಅಸೆಂಬ್ಲಿ ಏನು ಇದೆ ತದನಂತರ ಸೇರಿದ ಮೊದಲನೆ ದಿನ ಏನು ಇದೆ 27ನೇ ಆಗಸ್ಟ್‌ನಲ್ಲಿ

ಈ ಒಂದು ನೋಟಿಫಿಕೇಷನ್ನು ಇಟ್ಟಿದ್ದಾರೆ ತದನಂತರ 6 ವಾರಗಳಲ್ಲಿ ಸಹ ಇದನ್ನು ಯಾರೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ನಿಜವಾಗಲೂ ಸಹ ಸರ್ಕಾರಕ್ಕೆ ಆಸಕ್ತಿ ಇದ್ದರೆ ಇದನ್ನು ವಿಧೇಯಕವಾಗಿ ಮಾಡಬೇಕು ಎನ್ನುವ ಆಸಕ್ತಿ ಇದ್ದಿದ್ದರೆ ಆವತ್ತಿನ ದಿವಸ ಏನು ಅಧಿವೇಶನ ಇತ್ತು ಅದರಲ್ಲಿ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು ಸರ್ಕಾರ ಅವತ್ತು ಆ ಕೆಲಸವನ್ನು ಮಾಡಲಿಲ್ಲ. ಇವತ್ತು ಇದರ ಬಗ್ಗೆ ಬಹಳ ಗಂಭೀರವಾಗಿ ಅಲೋಚನೆ ಮಾಡುತ್ತಿದ್ದಾರೆ. ನಾನು ಕೇಳುತ್ತಿದ್ದೇನೆ. What prevented them from getting this Ordinance repealed and that Bill is approved by the House then? ಅದನ್ನು ಮಾಡಲಿಲ್ಲ. ಅದನ್ನು ಅವರಾಗಿಯೇ ಲ್ಯಾಪ್ಸ್ ಆಗುವುದಕ್ಕೆ ಬಿಟ್ಟರು. ತದನಂತರ ಗೌರ್ನರ್ ಮುಖಾಂತರ ನಾನು ಅದನ್ನು ಚರ್ಚೆ ಮಾಡುವುದಕ್ಕೆ ಇಚ್ಚೆ ಪಡುವುದಿಲ್ಲ ಏಕೆಂದರೆ ಅದಕ್ಕೆ ಬೇರೆ ಕಾರಣ ಇದೆ ಎಂಬುದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವ ಅಗತ್ಯ ಇಲ್ಲ. ಇಲ್ಲಿ ಗೌರ್ನರ್ ಹೆಸರನ್ನು ತರುವುದಕ್ಕೆ ನಾನು ಇಚ್ಚೆ ಪಡುವುದಿಲ್ಲ, ಆದರೆ ಯಾವ ಒಂದು ಸುಗ್ರಿವಾಜ್ಞೆಯನ್ನು ಮೇನಲ್ಲಿ ಮಾಡಿದ್ದರು ಅದನ್ನು ತಾನಾಗಿಯೇ ಹೋಗಲಿಕ್ಕೆ ಅವಕಾಶ ಮಾಡಿಕೊಟ್ಟರು. ಹಾಗೆ ಮಾಡಲಿಲ್ಲ ಅದಕ್ಕೆ ಬದಲಾಗಿ ಒಂದು ಇತಿಹಾಸ ಸೃಷ್ಟಿ ಮಾಡಿದ್ದಾರೆ. ಮಾನ್ಯ ಹಿರಿಯ ಸಚಿವರಾದ ಲೋಕೋಪಯೋಗಿ ಸಚಿವರು ಆಗಲೇ ಹೇಳುತ್ತಿದ್ದರು. ಇದೇನು ಇನ್ನೊಂದು ಆರ್ಡಿನೆನ್ಸ್ ಮಾಡಬಾರದೇ ಎಂದು ನಾನು ಕೇಳುತ್ತಿದ್ದೇನೆ ಯಾವ ರಾಜ್ಯದಲ್ಲಿ ಇಂತಹ ಒಂದು ಪರಿಸ್ಥಿತಿ ಇದೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಏಕಾಂತಯ್ಯನವರೇ, I fully share the views of the Hon. Member. ಆರ್ಡಿನೆನ್ಸ್‌ನ್ನು ದಿನಾ ಮಾಡಬೇಕು ಎನ್ನತಕ್ಕಂಥಾದ್ದು ಸರಿಯಲ್ಲ. ಆ ಪವರಸನ್ನು We should exercise it sparingly. ಎನ್ನತಕ್ಕಂಥ ಅಭಿಪ್ರಾಯವುಳ್ಳವನು ನಾನು. ಅನಿವಾರ್ಯ ಕಾರಣದಿಂದ ಆ ಕಾನೂನು ಇರಬೇಕಾದಂತಹ ಪರಿಸ್ಥಿತಿ ಬಂದರೆ ಅದರಿಂದ ಅನುಕೂಲವಾಗತಕ್ಕಂಥಾದ್ದು ಇದ್ದರೆ ಅನಿವಾರ್ಯ ಕಾರಣಗಳಿಂದ ರೀಪ್ಲೇಸ್ ಬಿಲ್ ಬಾರದೇ ಇರತಕ್ಕಂಥ ಕಾಲದಲ್ಲಿ ಇನ್ನೊಂದು ಆರ್ಡಿನೆನ್ಸ್ ಬರುತ್ತದೆ; ಆಗುತ್ತದೆ. ಆದರೆ ಆರ್ಡಿನೆನ್ಸ್ ಬರತಕ್ಕಂಥ ಪರಿಪಾಠ ಇರಬೇಕು ಎನ್ನುವ ವಿಚಾರಕ್ಕೆ ನನ್ನ ಸಮ್ಮತಿ ಇಲ್ಲ, ಇದು ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಬರುತ್ತದೆ. ಈಗ ಮಾನ್ಯ ಸದಸ್ಯರಿಗೆ ಹೇಗೆ ಹೇಳಬೇಕು ಮಾಲಫೈಡಿ ಉದ್ದೇಶ ಸರ್ಕಾರಕ್ಕೆ ಏನಾದರೂ ಇದ್ದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರೆ ಒಳ್ಳೆಯದು.

ಶ್ರೀ ಎಚ್. ಏಕಾಂತಯ್ಯ : ನಾನು ಒಪ್ಪುತ್ತೇನೆ. ನಾನು ಏನು ಹೇಳಿದೆ ಅಂದರೆ ಮಾನ್ಯ ಮಂತ್ರಿಗಳು ಇದನ್ನು ಒಪ್ಪಿಕೊಂಡಿದ್ದಾರೆ. ಅನಿವಾರ್ಯತೆ ಇದ್ದಾಗ ಮತ್ತು ತುರ್ತು ಸ್ಥಿತಿ ಇದ್ದಾಗ....

ಶ್ರೀ ಕೆ.ಹೆಚ್. ರಂಗನಾಥ್ : ಅನಿವಾರ್ಯ ಪರಿಸ್ಥಿತಿ ಇದ್ದಾಗ ಮಾಡುತ್ತಾರೆಂದು ಹೇಳಿದೆ.

ಶ್ರೀ ಎಚ್. ಏಕಾಂತಯ್ಯ : ಅದನ್ನೇ ಹೇಳುತ್ತೇನೆ. ಅನಿವಾರ್ಯತೆ ಇದ್ದಾಗ ತುರ್ತು ಪರಿಸ್ಥಿತಿ ಇದ್ದಾಗ ಇಂತಹ ಸುಗ್ರೀವಾಜ್ಞೆಗಳನ್ನು ತರುವುದು ಅವಶ್ಯಕ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಸ್ಪೆರೀಂಗ್ ಆಗಿ ಉಪಯೋಗಿಸಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ನನ್ನ ವಿರೋಧ ಇಲ್ಲ. ನಾವು ಸರ್ಕಾರವನ್ನು ನಡೆಸತಕ್ಕಂಥ ಕಾಲದಲ್ಲಿ ಸಹ ಸುಗ್ರಿವಾಜ್ಞೆಯನ್ನು ತಂದಿದ್ದೇವೆ. ಆದರೆ ನಾನು ತಮಗೆ ಕೇಳುತ್ತಿದ್ದೇನೆ. ಯಾವ ಒಂದು ಸುಗ್ರೀವಾಜ್ಞೆಯನ್ನು ತಂದಿದ್ದೀರಿ ಅದನ್ನು ವಿಧೇಯಕವಾಗಿ ಮಾಡಿ ಜಾರಿ ಮಾಡದಿರುವಂತಹ ಅಸಾಧ್ಯವಾದ ಪರಿಸ್ಥಿತಿ ಏನು ಇತ್ತು ನಿಮಗೆ? ಮೇನಲ್ಲಿ ಏನು ಸುಗ್ರೀವಾಜ್ಞೆಯನ್ನು ತಂದಿದ್ದೀರಿ. ಅದನ್ನು ಏತಕ್ಕಾಗಿ ತಾವು ವಿಧೇಯಕವಾಗಿ ಪರಿವರ್ತನೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ? ತಾವು ಏನು ಮಾಲಫೈಡಿ ಬೋನಾಫೈಡಿ ಪರಿಸ್ಥಿತಿ ಇತ್ತು ಎಂಬುದನ್ನು ಹೇಳಬೇಕು. ನಿಮಗೆ ಏನು ಕಷ್ಟ

ಇತ್ತು ಎನ್ನುವ ಮಾತನ್ನು ತಾವು ಹೇಳಬೇಕು. ನಾನು ಇನ್ನೊಂದು ಮಾತನ್ನು ಕೇಳುತ್ತಿದ್ದೇನೆ. ಇವತ್ತಿನ ದಿವಸ ತಾವು ಹೇಳಿದಿರಿ ಸುಗ್ರೀವಾಜ್ಞೆಯನ್ನು ಸ್ಪೆರಿಂಗ್ ಆಗಿ ಉಪಯೋಗಿಸಬೇಕು ಎನ್ನುವ ಮಾತು ಸರಿ ಎನ್ನುವುದಾದರೆ ಇಲ್ಲಿ ಅದು ಆಗಿಲ್ಲ. ತಾವು ಒಂದು ಇತಿಹಾಸವನ್ನು ಸೃಷ್ಟಿ ಮಾಡಿದ್ದೀರಿ. ಇಡೀ ಕರ್ನಾಟಕ ರಾಜ್ಯದಲ್ಲಿ ನನಗೆ ಗೊತ್ತಿರುವ ಹಾಗೆ ಒಂದು ಸುಗ್ರೀವಾಜ್ಞೆಯನ್ನು ಮತ್ತೊಂದು ಸುಗ್ರೀವಾಜ್ಞೆಯ ಮುಖಾಂತರ ರಿಪೀಲ್ ಮಾಡಿ ಆ ರಿಪೀಲ್ ಮಾಡಿದಂತಹ ಸುಗ್ರೀವಾಜ್ಞೆಯನ್ನು ಜಾರಿ ಮಾಡಲಿಕ್ಕೆ ಒಂದು ವಿಧೇಯಕ ತಂದಿರುವುದು ನಿಜವಾಗಿಯೂ ಸಹ ಇದು ವಿಶ್ವದಲ್ಲೇ ತಂದಿಲ್ಲ.

SRI M. VEERAPPA MOILY : I think, ignoring the amendment which is moved, if you speak, I don't think anybody can help the Member. Why don't you go through the amendment and speak about it?

ಶ್ರೀ ಎಚ್. ಏಕಾಂತಯ್ಯ : ಆಯಿತು ಅದಕ್ಕೆ ಬರುತ್ತೇನೆ. ಅಮೇಲೆ ಮಾತನಾಡುತ್ತೇನೆ. ಅಲ್ಲ 27ನೇ ಆಗಸ್ಟಲ್ಲಿ ತಂದಿದ್ದೀರಲ್ಲಾ ನಾವು ನಿಮಗೆ ಸರಿ ಎನಿಸುವ ಮಟ್ಟಿಗೆ ಸಾಧ್ಯವಾಗುವುದಿಲ್ಲ. ನೀವು ಖಂಡಿತವಾಗಿ ತಾವು ಹೇಳುವುದನ್ನು ಹೇಳಿ ಒಪ್ಪಿಗೆಯನ್ನು ಪಡೆದುಕೊಳ್ಳಿ ಅದಕ್ಕೆ ವಿಧೇಯಕವನ್ನು ಮಾಡಿ ಅದಕ್ಕೆ ಆಕ್ಷೇಪಣೆ ಮಾಡಿದರೆ ನಡೆಯುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಆದರೆ ಒಬ್ಬ ವಿರೋಧಪಕ್ಷದ ಸದಸ್ಯನಾಗಿ ಏನು ಸರ್ಕಾರ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಅದು ಒಂದು ಆದಾದ ಮೇಲೆ ಸ್ವಾಮಿ ನಾನು ಕೇಳುತ್ತಿದ್ದೇನೆ ಒಂದು ಸುಗ್ರೀವಾಜ್ಞೆಯನ್ನು ಮತ್ತೊಂದು ಸುಗ್ರೀವಾಜ್ಞೆಯ ಮುಖಾಂತರ ರಿಪೀಲ್ ಮಾಡಿದ್ದೀರಲ್ಲಾ ಇದರ ಇತಿಹಾಸ ಏನು ಇದೆ?

ನನಗೆ ಗೊತ್ತಿರುವ ಹಾಗೆ ಕರ್ನಾಟಕ ರಾಜ್ಯದಲ್ಲಿ ಇಂತಹ ಇತಿಹಾಸ ಆಗಿಲ್ಲ ಲ್ಯಾಪ್ಸ್ ಆಗಿರಬಹುದು ಬೇಕಾದರೆ. ಆದರೆ ಲ್ಯಾಪ್ಸ್ ಆಗುವುದಕ್ಕಿಂತ ಮೊದಲೇ ಮತ್ತೊಂದು ಸುಗ್ರೀವಾಜ್ಞೆಯ ಮುಖಾಂತರ ಅದಕ್ಕೆ ಜೀವವನ್ನು ಕೊಟ್ಟು ತಾವು ವಿಧೇಯಕವನ್ನು ಮಾಡಲಿಕ್ಕೆ ಇವತ್ತು ಹೊರಟಿದಿದ್ದೀರಲ್ಲ ಇದು ಒಂದು ಇತಿಹಾಸ ಅಲ್ಲವೇ? ನಾನು ಈ ಪುಸ್ತಕವೆಲ್ಲಾ ನೋಡಿದೆ ಸ್ವಾಮಿ ನನಗೇನೂ ಗೊತ್ತಾಗಲಿಲ್ಲ ಮಾನ್ಯ ಮುಖ್ಯಮಂತ್ರಿಗಳಿಂದ ನಾನು ತಿಳಿಯ ಬಯಸುತ್ತೇನೆ ಅವರು ನನಗಿಂತಲೂ ಹೆಚ್ಚು ಸಂಸದೀಯ ಪಟುಗಳು. ನಾನು ಅವರಿಂದ ಏನು ತಿಳಿಯಬಯಸುತ್ತೇನೆಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಮಾತ್ರ ಅಲ್ಲ ದೇಶದಲ್ಲೇ ಆಗಲಿ ಬೇರೆ ರಾಜ್ಯದಲ್ಲೇ ಆಗಲಿ ಈ ರೀತಿಯ ಸಾಂಪ್ರದಾಯ ಇದೆಯೇ ಎಂಬುದನ್ನು ನಾನು ತಿಳಿಯ ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾನು ಇಷ್ಟಕ್ಕೆ ಅದನ್ನು ಬಿಡುತ್ತೇನೆ. ಇದು ಅತ್ಯಂತ ಒಂದು ದುಃಖದ ಸಂಗತಿ ಅಂತ ನಾನು ಹೇಳುತ್ತೇನೆ. ಕೇವಲ ಒಂದು ಸುಗ್ರೀವಾಜ್ಞೆ ಮಾಡುವುದಿಲ್ಲ. ಮಾಡಿದಂತಹ ಮತ್ತೊಂದು ಸುಗ್ರೀವಾಜ್ಞೆಯನ್ನು ಮೊದಲಿನ ಸುಗ್ರೀವಾಜ್ಞೆಯನ್ನು ರದ್ದುಮಾಡುವುದು ಎರಡನೆಯ ಸುಗ್ರೀವಾಜ್ಞೆಗೆ ವಿಧೇಯಕವನ್ನು ತರುವುದು ಇದು ಏನು ಈ ರೀತಿ ಕಾನೂನಿಗೆ ವಿರುದ್ಧವಾಗಿ ತಂದಿದ್ದಾರೆ, ಇದು ಸರಿಯಲ್ಲ, ಆದ್ದರಿಂದ ಇದನ್ನು ಬೇಷರತ್ತಾಗಿ ಯಾವ ಪ್ರತಿಷ್ಠೆಗಳಿಗೆ ಮಾನ್ಯ ರಂಗನಾಥ್‌ರವರ ಭಾಷೆಯಲ್ಲಿ ಹೇಳುವುದಾದರೆ ದೊಡ್ಡ ಮನಸ್ಸಿನಿಂದ ಇದರಿಂದ ನಿಮ್ಮ ಕೀರ್ತಿ ದೊಡ್ಡದಾಗುತ್ತದೆ ತಪ್ಪನ್ನು ಕಂಡು ಹಿಡಿದಿದ್ದೀರಿ ನಾವು ಒಪ್ಪಿಕೊಳ್ಳುತ್ತೇವೆ ಇದನ್ನು ತಿದ್ದಿಕೊಳ್ಳುತ್ತೇವೆ ಎನ್ನುವ ಒಂದು ದೊಡ್ಡ ಮನಸ್ಸಿನಿಂದ ಈ ವಿಧೇಯಕವನ್ನು ಹಿಂತೆಗೆದುಕೊಳ್ಳಬೇಕು. ಬೇರೆ ಒಂದು ವಿಧೇಯಕವನ್ನು ನಾಳೆ ಬೆಳಿಗ್ಗೆ 8-00 ಗಂಟೆಗೆ ಇಡಿ. ನನ್ನದೇನೂ ಅಭ್ಯಂತರ ಇಲ್ಲ. ಅದು ಒಂದು ಎರಡನೆಯದಾಗಿ ಮಾನ್ಯ ಮಾವಲಂಕರ್‌ರವರು ಬರೆದಂತಹ ಒಂದೆರಡು ಪದಗಳನ್ನು ವಾಕ್ಯಗಳನ್ನು ನಾನು ತಮ್ಮ ಮುಂದೆ ಇಡಲು ಪ್ರಯತ್ನ ಮಾಡುತ್ತಿದ್ದೇನೆ.

"The issue of promulgation of the Ordinances by the President has been the subject-matter of correspondence between Speaker Mavalankar and Prime Minister Nehru. Writing to the Minister for Parliamentary Affairs on 25th November, 1950, Speaker Mavalankar said: 'The procedure of the promulgation of Ordinances is ginherently undemocratice. Whether an Ordinance is justifiable or not, the issue of a large number of Ordinances has psychologically a bad effect. The people carry an impression that the Government is carried on by Ordinances. The House carres a sense of being ignored and the Centreal Secretariat, perhaps, get into the habit of slackness which necessitates Ordinance and an impression is created that it is desired to committ the House to a particular legislation as the House has no alternative, but to put its seal on matters that have been legislated upon by the Ordinances. Such a state of things is not conducive to the development of the best parliamentary tradition. I don't want to say anything further."

ಮಾನ್ಯ ಅಧ್ಯಕ್ಷರೇ, ಈ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ಇದು ನನ್ನ ಪ್ರಕಾರ ಅಸಿಂಧುವಾಗಿದೆ. ಈವತ್ತಿನ ದಿವಸ ಏನು ಒಂದು ವಿಧೇಯಕವನ್ನು ತಂದಿದ್ದಾರೆ. ಇದಕ್ಕೆ ತಾವು ಒಪ್ಪಿಗೆಯನ್ನು ಕೊಡಬಾರದು ಮತ್ತು ಮಾನ್ಯ ಮಂತ್ರಿಗಳನ್ನು ನಾನು ನೇರವಾಗಿ ಕೇಳಿಕೊಳ್ಳುತ್ತಿದ್ದೇನೆ ಇದನ್ನು ತಾವು ಹಿಂತೆಗೆದುಕೊಳ್ಳಿ ನಮ್ಮ ನಿಯಮ 106ರ ಪ್ರಕಾರ ಏನಿದೆ ಅಧಿನಿಯಮ 106ರ ಪ್ರಕಾರ ಹಿಂತೆಗೆದುಕೊಂಡು ಹೊಸ ವಿಧೇಯಕವನ್ನು ನಾಳೆ ಬೇಕಾದರೆ ಮಂಡಿಸಿ ಆ ವಿಧೇಯಕ ಇತ್ತೀಚೆಗೆ ಜಾರಿಯಲ್ಲಿರುವ ಸುಗ್ರೀವಾಜ್ಞೆಯನ್ನು ರಿಪೀಲ್ ಮಾಡುವಂತದ್ದಕ್ಕೆ ಸಂಬಂಧಪಟ್ಟದ್ದಾಗಿರಬೇಕೇ ಹೊರತಾಗಿ ಮತ್ತೇನೂ ಆಗಿರಬಾರದು ಎನ್ನುವ ಮಾತನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತನ್ನು ಪ್ರಾಸ್ತಾವಿಕವಾಗಿ ಹೇಳಿ ಉಳಿದ ವಿಚಾರಗಳನ್ನು ನನ್ನ ಸ್ನೇಹಿತರಾದ ಬೈರೇಗೌಡರು ಪ್ರಸ್ತಾಪ ಮಾಡುವುದಕ್ಕೆ ಬಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಸ್ನೇಹಿತರಾದ ಮಾನ್ಯ ಏಕಾಂತಯ್ಯನವರು ತಮ್ಮ ತಾಂತ್ರಿಕವಾದ ವಿರೋಧವನ್ನು ಸೂಚಿಸಿದ್ದಾರೆ. ಏಕಾಂತಯ್ಯನವರಾಗಲೀ ನಾನಾಗಲೀ ಈ ವಿಧೇಯಕದಲ್ಲಿ ಅಡಗಿರುವ ಮೂಲ ಉದ್ದೇಶಕ್ಕೆ ವಿರೋಧ ಇಲ್ಲವೆಂಬ ಮಾತನ್ನು ನಾನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಏಕಾಂತಯ್ಯನವರ ಕಳಕಳಿ ಏನಿತ್ತು, ಏಕೆ ಇದೆಲ್ಲಾ ಆಯ್ತು ಎಂಬ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಬೇಕಾಗಿರುವುದು ಅತಿ ಅವಶ್ಯಕ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಅವರು ಮುಖ್ಯಮಂತ್ರಿಗಳಾದ ಬಹಳ ರಭಸದಲ್ಲಿ ಒಂದು ಮಾತನ್ನು ಈ ಸದನದಲ್ಲಿ ಹೇಳಿದರು. ಈ ಅಬ್ಕಾರಿ ಲಾಬಿಯನ್ನು ನಾನು ಸದೆಬಡಿಯುತ್ತೇನೆ, ಮೂಲೋಚ್ಚಾಟನೆ ಮಾಡುತ್ತೇನೆ ಎಂಬ ವೀರಾವೇಶದ ಮಾತುಗಳನ್ನಾಡಿ, ಒಂದು ಮಾತನ್ನು ಏನು ಹೇಳಿದಿರಿ ಎಂದರೆ ಇದಕ್ಕೆ ನಾನು ಕೈಹಾಕಬೇಕಾಗಿದ್ದರೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ, ನಾನು ವ್ಯೂಹ ರಚನೆ ಮಾಡಿಕೊಳ್ಳಬೇಕಾಗುತ್ತದೆ, ನಾನು ಅಭಿಮನ್ಯು ಆಗಲಾರೆ ಎಂಬ ವೀರಾವೇಶದ ಮಾತು ಆಡಿದಿರಿ. ನನಗೆ ಗೊತ್ತಿತ್ತು ಇದೆಲ್ಲಾ ವೀರಾವೇಶದ ಮಾತುಗಳು. ಆದರೆ ಈಗ ನಡೆದಿದ್ದೇನು ಎಂದರೆ ನಿಮ್ಮ ವೀರಾವೇಶದ ಮಾತುಗಳು ಎಷ್ಟರಮಟ್ಟಿಗೆ ಜಾರಿಗೆಯಾಗಲು ಸಾಧ್ಯವಾಯಿತು ಎಂಬ ಬಗ್ಗೆ ಮಾನ್ಯ ಏಕಾಂತಯ್ಯನವರು ಇಷ್ಟರವರೆಗೂ ಹೇಳಿದ್ದಾರೆ. ಕಳೆದ ಒಂದು ವರ್ಷದಿಂದ ಈಚೆಗೆ ನಮ್ಮ ರಾಜ್ಯದಲ್ಲಿ ರಾಜಕೀಯದ ಜಂಜಾಟ ಇಡೀ ದೇಶದಲ್ಲಿ

ಎಲ್ಲೂ ನಡೆಯಲಿಲ್ಲ. ಎಲಲೂ ನಡೆಯದೇ ಇದ್ದ ಕದನಗಳು ಈ ಸದನದಲ್ಲಿ ನಡೆದುವು. ಯಾವ ದೇಶದ ವಿಧಾನಸಭೆ ವಿಧಾಪರಿಷತ್ತನಲ್ಲಾಗಲೀ ನಡೆಯಲಿಲ್ಲ. ಆಡಳಿತ ಪಕ್ಷಕ್ಕೆ ಆನೆಬಲ ಇದ್ದರೂ ಕೂಡ ಒಂದು ಅತಿ ಮುಖ್ಯವಾದ ತಿದ್ದುಪಡಿಯನ್ನು ಈ ಸದನದ ಒಪ್ಪಿಗೆಯನ್ನು ಪಡೆಯಲಿಕ್ಕೆ ಸಾಧ್ಯವಾಗಲೇ ಇಲ್ಲ. ಆದ್ದರಿಂದ ಸುಗ್ರೀವಾಜ್ಞೆ ಮೇಲೆ ಸುಗ್ರೀವಾಜ್ಞೆ ತಂದಿರಿ. ಇಷ್ಟೆಲ್ಲಾ ರಾಜಕೀಯದ ಜಂಜಾಟ ನಡೆಯಬೇಕಾಗಿದ್ದರೆ ಈ ಮಸೂದೆ ಇದೆಯಲ್ಲಾ ಇದು ಒಂದು ಕಾರಣ. ಯಾರು ಸಾರಾಯಿಯನ್ನು ಬಾಟಲಿನಲ್ಲಿ ತುಂಬಿ ಮಾರಾಟ ಮಾಡುವ ಗುತ್ತಿಗೆ ಹೊಂದಿದ್ದರೋ ಮತ್ತು ಈ ವ್ಯವಹಾರದಲ್ಲಿ ಯಾರ್‍ಯಾರು ಇದ್ದರೋ ಅವರ ನೇರವಾದ ಕೈ ಈ ರಾಜಕೀಯದಲ್ಲಿ ಕಳೆದ ಒಂದು ವರ್ಷದಿಂದ ನಡೆದ ಜಂಜಾಟದಲ್ಲಿ ಇದೆ. ಇದು ಬಹಳ ಸ್ಪಷ್ಟ. ಅದನ್ನು ಗೆಳೆಯರಾದ ಏಕಾಂತಯ್ಯನವರು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರ ತಾಂತ್ರಿಕವಾದ ವಿರೋಧವನ್ನು ಮಾತ್ರ ಹೇಳಿದ್ದಾರೆ. ಕೊನೆಗೂ ಎಂಟು ವರ್ಷಕ್ಕೆ ಮಗ ದಂಟಾದ ಎಂಬಂತೆ ಇವತ್ತು ಈ ಮಸೂದೆಯನ್ನು ಸದನದ ಒಪ್ಪಿಗೆಗಾಗಿ ಇಟ್ಟಿದ್ದೀರಿ. ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ತಾವು ನಮ್ಮ ಈ ಪಾಲಿಸಿಯನ್ನು ತಮ್ಮ ಬಜೆಟರಿ ಭಾಷಣದಲ್ಲಿ ಹೇಳಿದಂತಹ ಸಂದರ್ಭದಲ್ಲಿ ನಾನು ತಮಗೆ ಮಧ್ಯದಲ್ಲೇ ಎದ್ದು ನಿಂತು ಮೂರು ಸಾರಿ ಅಭಿನಂದಿಸಿದೆ, ಈ ಕೆಲಸ ಮಾಡುವುದಕ್ಕೆ ತಾವು ಹೊರಟಿದ್ದೀರಿ ಅಂತ. ಆ ಕೆಲಸ ಇವತ್ತು ತಾವು ತಿದ್ದುಪಡಿ ಮೂಲಕ ಮಾಡಿದ್ದೀರಿ, ಸಂತೋಷ. ಆದರೆ ಇಲ್ಲಿ ಆಗಿರುವಂಥದು ಏನು ಎಂದು ವಿಮರ್ಶೆ ಮಾಡಬೇಕಾದ ಅವಶ್ಯಕತೆ ಇದೆ. ನಾನು ಹೃತ್ಪೂರ್ವಕವಾಗಿ ಒಂದು ಪದ ಹೇಳಿದ್ದೇನೆ. ನೀವು ವ್ಯೂಹ ರಚನೆ ಮಾಡಿ ನಾನು ಅಭಿಮನ್ಯು ಆಗಲಾರೆ ಎಂಬ ಮಾತು ಹೇಳಿದಿರಲ್ಲಾ, ಹೌದು, ನೀವು ಅಭಿಮನ್ಯು ಆಗುವುದಿಲ್ಲ ಎಂಬ ನಂಬಿಕೆ ಇತ್ತು. ನೀವು ಅಭಿಮನ್ಯು ಅಲ್ಲ, ಭೀಮನೋ ಅಥವಾ ಅರ್ಜುನನೋ ಆಗುತ್ತೀರ ಎಂದು ನಾನು ಅಂದು ಕೊಂಡಿದ್ದೆ. ಭೀಮನೂ ಆಗಲಿಲ್ಲ, ಅರ್ಜುನನೂ ಆಗಲಿಲ್ಲ. ನೀವು ಉತ್ತರಕುಮಾರ ಆಗಿದ್ದೀರಿ.

(ನಗು)

ಶ್ರೀ ಕಾಗೋಡು ತಿಮ್ಮಪ್ಪ : ವ್ಯೂಹ ರಚನೆ ಆಗುತ್ತದೆ; ಅಭಿಮನ್ಯು ಹೋಗುತ್ತಾನೆ. ಕೈ ಕತ್ತರಿಸಿಬಿಡುತ್ತಾರೆ. ಆ ವ್ಯೂಹ ಭೇದನ ಮಾಡುವ ಗುಟ್ಟು ಯಾರಿಗೆ ಗೊತ್ತು ಹೇಳಿ ನೋಡೋಣ.

ಶ್ರೀ ಸಿ. ಬೈರೇಗೌಡ : ನಾನು ಈ ಮಹಾಭಾರತ ಅಥವಾ ರಾಮಾಯಣವನ್ನೆಲ್ಲಾ ತಲೆಗೆ ಅಂಟಿಸಿಕೊಳ್ಳುವುದಕ್ಕೆ ಹೋಗಲಿಲ್ಲ. ನಾನು ಉಳುವವನ ಮಗ. ಅದ್ದರಿಂದ ಊಳೋದು ಚೆನ್ನಾಗಿ ಗೊತ್ತಿದೆ. ತಿಮ್ಮಪ್ಪ ಕೂಡ ನನ್ನಂತೆ ಉಳುವವರ ಮಗಾನೇ. ನೀವು ತಿಳಿದುಕೊಳ್ಳುವುದಕ್ಕೆ ಹೋಗಿದ್ದಿರಿ, ತಿಳಿದುಕೊಂಡಿದ್ದರೆ ಸಂತೋಷ.

ಶ್ರೀ ಕಾಗೋಡು ತಿಮ್ಮಪ್ಪ : ಈ ವ್ಯೂಹ ಭೇದ ಮಾಡುವುದು ಕೃಷ್ಣನಿಗೆ ಒಬ್ಬನಿಗೆ ಗೊತ್ತಿತ್ತು, ಬೇರೆ ಯಾರಿಗೂ ಗೊತ್ತಿರಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ತಿಮ್ಮಪ್ಪನವರೇ, ಕೃಷ್ಣ ಯಾರು?

ಶ್ರೀ ಸಿ. ಬೈರೇಗೌಡ : ನಾನು ಅನೇಕ ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ ಮೂಲ ಉದ್ದೇಶ ಏನಿದೆ ಅದನ್ನು ಸಂಪೂರ್ಣ ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ಕಾರ್ಯಗತ ಆಗಿದೆ ಇದು. ಕಳೆದ ಸುಮಾರು ಆರೇಳು ತಿಂಗಳಿಂದ 1-7-93 ರಿಂದ ಇವತ್ತಿನವರೆಗೂ ಇದು ಕಾರ್ಯಗತವಾಗಿದೆ. ಯಾವ ರೀತಿ ಆಗಿದೆ ಎಂಬುದನ್ನು ಸ್ವಲ್ಪ ವಿವರಣೆ ಕೊಡುವುದು ಸೂಕ್ತ ಅಂತ ನನಗನ್ನಿಸುತ್ತದೆ. ಮಾನ್ಯ ಅಧ್ಯಕ್ಷರೇ, ಮೊದಲಿಗೆ ಬಾಟಲ್ ಮೂಲಕ ಸಾರಾಯಿಯನ್ನು ಸರಬರಾಜು ಮಾಡುತ್ತಿದ್ದರು. ಈ

ಇಲಾಖೆಯ ಒಂದು ಅಂದಾಜು ಇದೆ. ನಮ್ಮ ರಾಜ್ಯದಲ್ಲಿ ವರ್ಷಕ್ಕೆ ಸುಮಾರು 8 ಕೋಟಿ ಲೀಟರ್ ಖರ್ಚಾಗುತ್ತದೆ ಎಂಬ ಒಂದು ಅಂದಾಜಿದೆ.

ಇದು 8 ಕೋಟಿಯಲ್ಲ. ನನ್ನ ಲೆಕ್ಕದ ಪ್ರಕಾರ ಸುಮಾರು 15 ರಿಂದ 16 ಕೋಟಿ ಲೀಟರ್ ಸಾರಾಯಿ ಈ ರಾಜ್ಯದಲ್ಲಿ ಮಾರಾಟವಾಗುತ್ತಿದೆ. ಅದಕ್ಕೇ ಒಂದು ದೊಡ್ಡ ವ್ಯೂಹ, ವ್ಯವಸ್ಥೆ ಎಲ್ಲಾ ಬಹಳ ಚೆನ್ನಾಗಿ ನಡೆಯುತ್ತಿದೆ. ಅದು ಇವತ್ತಿಂದ ನಡೆಯಲಿಲ್ಲ. ಬಹಳ ವರ್ಷಗಳಿಂದ ನಡೆದಿದೆ. ನಾನು ಇದನ್ನು ಹೇಳುವ ಸಂದರ್ಭದಲ್ಲಿ ಆ ಸರ್ಕಾರ ಈ ಸರ್ಕಾರ ಅಂತ ವ್ಯತ್ಯಾಸ ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ಸರ್ಕಾರಗಳಿದ್ದಾಗಲೂ ಇವರ ಪ್ರಾಬಲ್ಯ ಇವರ ಆಧಿಪತ್ಯ ಈ ರಾಜ್ಯದಲ್ಲಿ ನಡೆಯುತ್ತಾ ಬಂದಿದೆ. ಇದನ್ನು ಬಹಳ ವ್ಯಥೆಯಿಂದ ನಾನು ಹೇಳಲು ಕಾರಣವೇನೆಂದರೆ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣ ಬೆರಳಲ್ಲಿ ಕಣಿಸುತಕ್ಕಂಥವರ ಕೈಗೆ ಅದರ ಖಜಾನೆಗೆ ಹೋಗಿದೆ. ಇದು ಸತತವಾಗಿ ಹೋಗುತ್ತಿದೆ. ಇದನ್ನು ಅನೇಕ ಸಾರಿ ಈ ಸದನದಲ್ಲೂ ಮತ್ತು ಸದನದ ಹೊರಗಡೆಯಲ್ಲೂ ನಾನು ಬಹಿರಂಗವಾಗಿ ಹೇಳಿದ್ದೇನೆ. ನಾನು ಹೇಳಿರುವ ಅಂಕಿಅಂಶಗಳು ಈ ಸದನದಲ್ಲೇ ನಿಜ ಎಂಬುದು ಸಾಬೀತಾಗಿದೆ. ನಾನೇನೂ ದೊಡ್ಡ ಪರಿಣಿತ ಎಂದು ಹೇಳತಕ್ಕಂಥದಲ್ಲ, ನಾನೊಬ್ಬ ಸಾಮಾನ್ಯ ಮನುಷ್ಯನಾಗಿ ಅಂದಾಜಿನ ಪ್ರಕಾರ ಹೇಳಿದ್ದು ನಿಜ ಎಂದು ಸಾಬೀತಾಗಿದೆ; ಸರ್ಕಾರ ಒಪ್ಪಿದೆ. ನನ್ನಂಥ ಒಬ್ಬ ಸಾಮಾನ್ಯ ಮನುಷ್ಯನ ಲೆಕ್ಕ ಸರಿಯಾಗಿರಬೇಕಾಗಿದ್ದರೆ ಇದನ್ನು ಕರಾರುವಾಕ್ಕಾಗಿ ಎಷ್ಟು ನಡೆಯುತ್ತಿದೆ ಏನು ಎಂದು ಲೆಕ್ಕಹಿಡಿದು ನಡೆಸುವುದಾದರೆ ಎಷ್ಟು ಸಾವಿರಾರು ಕೋಟಿ ರೂಗಳಷ್ಟು ಹಣ ಬೊಕ್ಕಸಕ್ಕೆ ಬರಬೇಕಾದ ಹಣ ಯಾರ್‍ಯಾರ ಜೇಬಿಗೆ ಸೇರಿದೆ ಎಂದು ನೆನಸಿಕೊಂಡಾಗ ಒಂದು ವಿಧದಲ್ಲಿ ನಾವೆಲ್ಲರೂ ಕೂಡ, ನಾವೆಲ್ಲರೂ ಅಂದರೆ ಕೆಲವರು ಸಿಟ್ಟಾಗಬಹುದು, ನನ್ನಂಥವನು ಅದಕ್ಕೆ ಭಾಗಿಯಾಗುತ್ತಿದ್ದೇನಲ್ಲಾ ಎಂಬ ದುಃಖ ನನ್ನನ್ನು ಕಾಡಿಸುತ್ತಿದೆ. ಆದ್ದರಿಂದ ಅಧ್ಯಕ್ಷರೇ, ಇಂದು ಹಿಂದೆ ವಿವರವಾಗಿ ನಡೆದಿರುವುದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಈ ತಿದ್ದುಪಡಿ ಕಾನೂನು ಜಾರಿಯಾದ ಮೇಲೆ ಏನಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ. ನಾನು ಆಗಲೇ ಹೇಳಿದೆ, ಸುಮಾರು 8 ಕೋಟಿ ಲೀಟರ್ ಖರ್ಚಾಗುತ್ತದೆ ಎಂಬುದು ಸರಿಯಾದ ಲೆಕ್ಕವಲ್ಲ. ನನ್ನ ಲೆಕ್ಕದ ಪ್ರಕಾರ 15 ರಿಂದ 16 ಕೋಟಿ ಲೀಟರ್ ಇಲ್ಲಿ ಖರ್ಚಾಗುತ್ತಿದೆ. ಒಂದು ವರ್ಷಕ್ಕೆ. ಇದಕ್ಕಿಂತ ಮೊದಲು ಶೀಸೆಯಲ್ಲಿ ತುಂಬಿ ಮದ್ಯವನ್ನು ಮಾರಾಟ ಮಾಡುವಂತಹ ಪದ್ಧತಿ ನಮ್ಮಲ್ಲಿ ಜಾರಿಯಿತ್ತು. ಆಗ ಒಂದು ಲೀಟರ್ ಬೆಲೆ 25 ರೂ 44 ಪೈಸೆ ಇತ್ತು.

6.30 ಪಿ.ಎಂ.

ಆಗ ಬಾಟ್ಲಿಂಗ್ ಚಾರ್ಜಸ್ ಏನು ಇದೆ ಅದನ್ನು ಯಾರು ಕಂಟ್ರಾಕ್ಟರುದಾರರಿದ್ದರು ಅವನೇ ಕೊಡಬೇಕಾಗಿತ್ತು. ಈಗ ಅದಿಲ್ಲ. ಸರಕಾರ ಸ್ಯಾಚೆಟ್ನಲ್ಲಿ ತುಂ ಮಾರತಕ್ಕಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಪ್ಲಾಸ್ಟಿಕ್ ಚೀಲದಲ್ಲಿ ಮಾರಬೇಕೆನ್ನುವ ಸುಗ್ರೀವಾಜ್ಞೆಯ ಅನ್ವಯ ಇದು ಜಾರಿಗೆ ಬಂದ ಮೇಲೆ ಅದನ್ನು 16 ರೂಪಾಯಿಗೆ ಮಾರಾಟ ಮಾಡಬೇಕೆಂದು ನಿಗದಿಪಡಿಸಿದ್ದಾರೆ. ಇದರಲ್ಲಿ ಇವರ ನೋಟಿಫಿಕೇಷನ್ ಪ್ರಕಾರ ಕಾಸ್ಟ್ ಆಫ್ ಅರ್‍ಯಾಕ್ ಬಲ್ಕ್ ಲೀಟರ್ ಇನ್ 50 ಎಂ ಎಲ್ or 100 ml polythene sachet is Rs. 16.00. ಎನ್ನುವುದನ್ನು ಸರಕಾರ ನಿಗದಿಪಡಿಸಿದೆ. ಇದರಲ್ಲಿ ಮೊದಲು 25-44 ಪೈಸೆ ಇತ್ತು ಈಗ 16 ರೂಪಾಯಾಗಿದೆ. ಇದರಲ್ಲಿ 9-44 ಪೈಸೆ ವ್ಯತ್ಯಾಸವಿದೆ. 8 ಕೋಟಿ ನಿಮ್ಮ ಲೆಕ್ಕದ ಪ್ರಕಾರ 8 ಕೋಟಿ ಲೀಟರ್ ಸಾರಾಯಿ ಮಾರಾಟವಾಗುತ್ತಿತ್ತು. ಈ ಒಂದು ಬಾಬಿನಲ್ಲಿ ಸುಮಾರು 75.52 ಕೋಟಿಯಷ್ಟು ಹಣ ಏನು ಇದೆ ಇದು ಸರಕಾರದ ಬೊಕ್ಕಸಕ್ಕೆ ಬರಬೇಕಾಗಿತ್ತು ಇಲ್ಲವೇ ಬಳಕೆದಾರನಿಗೆ ಹೋಗಬೇಕಾಗಿತ್ತು.

ಆದರೆ ಇಲ್ಲಿ ಸರಕಾರಕ್ಕೂ ಇಲ್ಲ, ಬಳಕೆದಾರನಿಗೂ ಇಲ್ಲವಾಗಿದೆ. ಮಿನಿಮಮ್ ಮತ್ತು ಮ್ಯಾಕ್ಸಿಮಮ್ ಪ್ರೈಸ್ ಏನು ಇತ್ತು ಅದನ್ನು ಕಡಿಮೆ ಮಾಡುವುದಕ್ಕೆ ಹೋಗಲಿಲ್ಲ ಇವರು. ಬುದ್ಧಿವಂತಿಕೆ ಮಾಡುತ್ತಾರೆ ಮಾನ್ಯ ಮುಖ್ಯ ಮಂತ್ರಿಗಳು; ಅವರು ಬುದ್ಧಿವಂತಿಕೆಯಿಂದ ಅನೇಕ ಸಾರಿ ಮಾಡಿ ಪ್ರತಿ ಸಂದರ್ಭದಲ್ಲೂ ಸಿಕ್ಕಿಕೊಂಡಿದ್ದಾರೆ. ಇವರು ನೋಟಿಫಿಕೇಷನ್ ಹೊರಡಿಸುವುದರಲ್ಲಿ ವಿಚಾರ ಮಾಡಬೇಕು. ಅಂದರೆ ಪ್ರತಿ ವರ್ಷ ಹರಾಜು ಮಾಡುವುದಕ್ಕಿಂತ ಮೊದಲು ನೋಟಿಫಿಕೇಷನ್ ಹೊರಡಿಸುತ್ತಾರೆ. ಪ್ರಥಮವಾಗಿ ಹೊರಡಿಸಿದಂತಹ ನೋಟಿಫಿಕೇಷನ್ನಲ್ಲಿ the minimum selling price of arrack in polythene sachet by contractors shall be Rs. 45 per litre. ಲೀಟರ್ ಮಿನಿಮಮ್ ಎಂದು ಇತ್ತು. ಈ ಸೆಕೆಂಡ್ ನೋಟಿಫಿಕೇಷನ್ನಲ್ಲಿ ಮ್ಯಾಕ್ಸಿಮಮ್ ಪ್ರೈಸ್ ಎನ್ನುವುದಿಲ್ಲ. ಹಿಂದೆ ನಡೆದಂತಹ ಎಲ್ಲಾ ಹರಾಜುಗಳಲ್ಲಿ ಮಿನಿಮಮ್ ಪ್ರೈಸ್ 45 ಇದ್ದರೆ ಮ್ಯಾಕ್ಸಿಮಮ್ 75 ಎಂದು ನಿಗದಿ ಪಡಿಸಿದ್ದರು. ಪ್ರಥಮವಾಗಿ ಬಂದಂತಹ ಈ ನೋಟಿಫಿಕೇಷನ್ನಲ್ಲಿ ಮಿನಿಮಮ್ ಪ್ರೈಸ್ ಅನ್ನು ನಿಗದಿ ಮಾಡಿದಿರೇ ವಿನಃ ಮ್ಯಾಕ್ಸಿಮಮ್ ಫ್ರೈಸ್ ಅನ್ನು ಫಿಕ್ಸ್ ಮಾಡಲಿಲ್ಲ ಏಕೆ? ಅವರು ಎಷ್ಟಕ್ಕೆ ಬೇಕಾದರೂ ಮಾರಾಟ ಮಾಡಬಹುದೇ? ಈ ನ್ಯೂನತೆಯನ್ನು ಅವರ ಗಮನಕ್ಕೆ ತಂದಾಗ ಅವರು ಈ ಸದನದಲ್ಲಿ ಒಪ್ಪಿಕೊಂಡರು. ಮೊದಲು ಇದು ಇರಲಿಲ್ಲ. ಮ್ಯಾಕ್ಸಿಮಮ್ 75 ಎಂದು ನಿಗದಿ ಪಡಿಸಿದ್ದಾರೆ. ಅದೇ ರೀತಿ ಮಾರಾಟವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಸರಕಾರದವರು ಈಗ ಹೇಳಬೇಕು ಎಷ್ಟು ಮ್ಯಾಕ್ಸಿಮಮ್ ಪ್ರೈಸ್ಗೆ ಎಂದು. ಇಲ್ಲಿ ಏನು ಮ್ಯಾಕ್ಸಿಮಮ್ ರೇಟ್ ಎಂದು ಹೇಳುತ್ತೀರಿ. ಅದಕ್ಕಿಂತ ಜಾಸ್ತಿ ಮಾರಾಟ ಮಾಡುತ್ತಿಲ್ಲವೆನ್ನುವುದನ್ನು ತಿಳಿಸಬೇಕು. ಒಂದು ಬಾಬಿನಲ್ಲಿ 75.52 ಕೋಟಿಯಷ್ಟು ಹಣ ಕಂಟ್ರಾಕ್ಟರದಾರರ ಜೇಬಿಗೆ ಹೋಗುತ್ತಿದೆ. ಯಾರು ಕಂಟ್ರಾಕ್ಟರುದಾರರಿದ್ದಾರೆ ಅವನ ಜೇಬಿಗೆ ಹೋಗುತ್ತಿದೆ ಸರಕಾರಕ್ಕೂ ಇಲ್ಲ ಬಳಕೆದಾರನಿಗೂ ಇಲ್ಲ. ಬೇರೆ ಬೇರೆ ಸುಂಕಗಳು ಇದೆ. ಮೊದಲು ಎಕ್ಸೈಸ್ ಡ್ಯೂಟಿ 1 ಲೀಟರ್ ಸಾರಾಯಿಗೆ 7 ರೂಪಾಯಿ ಇತ್ತು ಈಗಲೂ 7 ರೂಪಾಯಿಗೆ ನಿಗದಿ ಪಡಿಸಿದ್ದೀರಿ. ನಿಜ ಇರಲಿ. ಅದಕ್ಕೆ ಸೇಲ್ಸ್ ಟ್ಯಾಕ್ಸ್ ಇತ್ತು. ಮೊದಲು 1 ಲೀಟರಿಗೆ 4-24 ಪೈಸೆ ಇತ್ತು. 20 ಪರ್ಸೆಂಟ್ ಇತ್ತು ಏಕೆಂದರೆ 25 ರೂಪಾಯಿಯವರೆಗೆ ಮಾರಾಟವಾಗುತ್ತಿತ್ತು. ಅಲ್ಲ, ಈಗ 4 ರೂಪಾಯಿ 25 ಪೈಸೆ ಇತ್ತು. ಸಾರಾಯಿ ಮಾರಾಟದ ಬೆಲೆ ಕಡಿಮೆ ಇದ್ದು 2Ë6 7ಕ್ಕೆ ಬಂತು. ಮೊದಲು ಒಂದು ಲೀಟರ್‌ಗೆ 17 ಪೈಸೆ ಎಂಟ್ರಿ ಟ್ಯಾಕ್ಸ್ ಇತ್ತು. ಈಗ ಅದು 0.03 ಪೈಸೆ. ಅದೇ ರೀತಿ ವರ್ಕ್ ಕಂಟ್ರಾಕ್ಟ್ ಟ್ಯಾಕ್ಸ್ ಎನ್ನತಕ್ಕಂಥ ಬಾಟಲಿಯಲ್ಲಿ ಮಾರಾಟ ಮಾಡುತ್ತಿದ್ದಾಗ 39 ಪೈಸೆ ಇತ್ತು, ಈಗ ಅದು 0.9 ಪೈಸೆ. ಮೊದಲು ಒಂದು ಲೀಟರ್‌ಗೆ ಟ್ಯಾಕ್ಸಸ್ ಎಲ್ಲಾ ಸೇರಿ 11.80 ಪೈಸೆ ಇರತಕ್ಕಂಥದ್ದು. ಇದೆಲ್ಲಾ ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಆದಾಯ. 11.80 ಪೈಸೆ ಬಾಟ್ಲಿಂಗ್ ಮಾಡುತ್ತಿರತಕ್ಕಂಥದ್ದರಲ್ಲಿ, ಈಗ ಸ್ಯಾಚೆಟ್ ಮಾಡುತ್ತಿರುವುದರಿಂದ ಅದು ಎಲ್ಲಿಯವರೆಗೂ ಬಂತು ಎಂದರೆ 9.79 ಪೈಸೆಗೆ ಇಳಿದಿದೆ. ಇದರಿಂದ ಎಂಟು ಕೋಟಿ ಲೀಟರ್ಗೆ ಇವರ ಪ್ರಕಾರ ಲೆಕ್ಕ ಹಾಕಿದರೆ 16.08 ಕೋಟಿ ರೂಪಾಯಿಯಷ್ಟು ಹಣ ಇದು ಟ್ಯಾಕ್ಸ್ಗೆ ಕನ್ಸೆಷನ್ ಕೊಟ್ಟಿದ್ದೀರಿ. ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಹಣ. ಸರ್ಕಾರಕ್ಕಿಲ್ಲ. ಈ ಹಣದಿಂದ ಬಳಕೆದಾರರಿಗೆ ಏನಾದರೂ ಹೋಗಿದೆಯೇ ಎಂದರೆ ಇಲ್ಲ. ಇದು ಕಂಟ್ರಾಕ್ಟರ್ಗೆ ಬಂತು 16.08 ಕೋಟಿ ರೂಪಾಯಿಯಷ್ಟು ಹಣ ಕಂಟ್ರಾಕ್ಟರ್ ಜೇಬಿಗೆ ಹೋಗುತ್ತಿದೆ. ಇದಾದ ಮೇಲೆ ಈಗ ಸರ್ಕಾರದವರು ಪ್ಲಾಸ್ಟಿಕ್ ಚೀಲಕ್ಕೆ ಸಾರಾಯಿಯನ್ನು ತುಂಬತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ, ಇದರ ಬೆಲೆ ಒಂದು ಲೀಟರ್ಗೆ 2.32 ರೂಪಾಯಿಯಷ್ಟು ಸರ್ಕಾರಕ್ಕೆ ಇದರಿಂದ ಖರ್ಚಾಗುತ್ತಿದೆ. ಇದು

ಮೊದಲು ಬಾಟ್ಲಿಂಗ್ ಛಾರ್ಜಸ್ 7 ಚಿಲ್ಲರೆ ರೂಪಾಯಿ ಏನಿತ್ತು, ಅದನ್ನು ಮೊದಲು ಕಂಟ್ರಾಕ್ಟರ್ ಕೊಡಬೇಕಾಗಿತ್ತು. ಈಗ ಅದಿಲ್ಲ. ಸರ್ಕಾರದವರೇ ಎರಡು ರೂಪಾಯಿ ಮೂವತ್ತೆರಡು ಪೈಸೆ ಕೊಟ್ಟು ಸರ್ಕಾರದ ಖರ್ಚಿನಲ್ಲಿ ಇವತ್ತಿನ ದಿವಸ ಸ್ಯಾಚೆಟ್ಟನ್ನು ಮಾಡಿಸಿ ಕೊಡುತ್ತಿದ್ದಾರೆ. ಇದೆಲ್ಲ ಸೇರಿ ಸುಮಾರು 110.16 ಕೋಟಿ ರೂಪಾಯಿಯಷ್ಟು ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಹಣ ಇವತ್ತು ರಾಜ್ಯದಲ್ಲಿ ಈ ಎಕ್ಸ್ ಕಂಟ್ರಾಕ್ಟರ್ ಜೇಬಿಗೆ ಇವತ್ತು ನೇರವಾಗಿ ಹೋಗುತ್ತಿದೆ. ನಾನು ಮಾನ್ಯ ಮೊಯಿಲಿಯವರು ಭೀಮನೋ ಅರ್ಜುನನೋ ಆಗುತ್ತಾರೆಂದು ಭಾವಿಸಿದ್ದೆ. ಅವರೇ ಹೇಳಿರುವ ಭಾಷೆಯಲ್ಲಿ "ನಾನು ಅಭಿಮನ್ಯು ಆಗುವುದಿಲ್ಲ" ಎಂದು ಹೇಳಿದಾಗ ಇವರು ಭೀಮನೊ ಅರ್ಜುನನೋ ಆಗುತ್ತಾರೆಂದು ಭಾವಿಸಿದ್ದೆ. ಆ ಭಾವನೆ ಸಂಪೂರ್ಣವಾಗಿ ಇವತ್ತಿನ ದಿವಸ ತಪ್ಪಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನೀವು ಮ್ಯಾಥ್ಯಮ್ಯಾಟಿಕ್ಸ್ ಸ್ಟೂಡೆಂಟಾ?

ಶ್ರೀ ಸಿ. ಬೈರೇಗೌಡ : ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದೇ ಕಷ್ಟವಾಗುತ್ತಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಇನ್ನು ಒಂದು ಮಾತನ್ನು ಮರೆತಿರಿ, ಬೈರೇಗೌಡರೇ, ನನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ರಾಜ್ಯಕ್ಕಾಗಿ ಎಕ್ಸೈಸ್ ಲಾಬಿಗೆ ಬಗ್ಗುವುದಿಲ್ಲ, ಬಗ್ಗು ಬಡಿಯುತ್ತೇನೆ ಎಂದು ಹೇಳಿದ್ದರು. ನೀವು ಮರೆತಿರಬೇಕು ಅದನ್ನು.

ಒಬ್ಬ ಮಾನ್ಯ ಸದಸ್ಯರು : ಆಪರೇಷನ್ ಮಾಡುತ್ತೇವೆ ಎಂದು ಹೇಳಿದ್ದರಲ್ಲಾ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮೇಜರ್ ಆಪರೇಷನ್ ಮಾಡುತ್ತೇವೆ ಎಂದು ಹೇಳಿದ್ದರು. ಅದೇ ಅವರಿಗೆ ವುಲ್ಟಾ ಆಯಿತು.

ಶ್ರೀ ಸಿ. ಬೈರೇಗೌಡ : ಇದು ಲೆಕ್ಕ. ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು, ಬೆಂಗಳೂರಿನಲ್ಲಿ ನಾವು ತೆಗೆದುಕೊಂಡಿದ್ದೇವೆ ಎಂದು, ಹೌದು ಸ್ವಾಮಿ, ತೆಗೆದುಕೊಂಡಿದ್ದೀರಿ, ನಿಜ. ನಡೆಯಿರಿ, ಈಗ ಹೋಗೋಣ ಯಾರು ನಡೆಸುತ್ತಿದ್ದಾರೆ ಎಂದು ನೋಡೋಣ. ಈಗ ಯಾರು ನಡೆಸುತ್ತಿದ್ದಾರೆ, ನಡೆಯಿರಿ, ನಾನು ಅದಕ್ಕೋಸ್ಕರ ತಿದ್ದುಪಡಿ ತಂದಾಗ ಏನು ಹೇಳಿದೆ, ನಾನು ಹೇಳಿದ್ದನ್ನು ಸರ್ಕಾರದವರು ಆ ದಿಕ್ಕಿನಲ್ಲಿ ಆಲೋಚನೆ ಮಾಡಿದ್ದಾರೆ. ನಾನು ಹೇಳಿದೆ, ಸ್ವಾಮಿ, ನೀವು ಅಂಗಡಿಗಳನ್ನು ಮುಖ್ಯವಾಗಿ ಇದರಲ್ಲಿ ಇವರ ಲೆಕ್ಕದ ಪ್ರಕಾರ ಎಂಟು ಕೋಟಿ ಸಾರಾಯಿ ರಾಜ್ಯದಲ್ಲಿ ಮಾರಾಟ ಆಗುತ್ತಿರುವಂಥದ್ದಲ್ಲಿ ಶೇಕಡ 30 ರಿಂದ 40 ರಷ್ಟು ಇನ್ನೂ ಜಾಸ್ತಿಯಾಗಿ ಬೆಂಗಳೂರು ನಗರದಲ್ಲಿ ಒಂದರಲ್ಲೇ ಸಾರಾಯಿ ಮಾರಾಟವಾಗುತ್ತಿದೆ. ಈ ಬೆಂಗಳೂರು ಒಂದನ್ನು ಹತೋಟಿಗೆ ತೆಗೆದುಕೊಳ್ಳಿ. ಇದರಿಂದ ನಿಮಗೆ ಆದಾಯ ಜಾಸ್ತಿಯಾಗುತ್ತದೆ. ಇದರಿಂದ ಏನು ಪ್ರಮುಖವಾಗಿರತಕ್ಕಂಥ ಈ ಸರ್ಕಾರಗಳನ್ನು ಅಲ್ಲಾಡಿಸತಕ್ಕಂಥ, ಸರ್ಕಾರಗಳನ್ನು ಕಿತ್ತು ಬೇರೆ ಸರ್ಕಾರಗಳನ್ನು ತರತಕ್ಕಂಥ ಶಕ್ತಿ ಏನು ಈ ಎಕ್ಸೈಸ್ ಲಾಬಿಗೆ ಇದೆ, ಆ ಶಕ್ತಿ ಎಲ್ಲ ಇರತಕ್ಕಂಥದ್ದು ಕೇಂದ್ರೀಕರಣವಾಗಿರತಕ್ಕಂಥದ್ದು ಬೆಂಗಳೂರಿನಲ್ಲಿ. ಅದರಿಂದಲೇ ನಾನು ಸಲಹೆ ಮಾಡಿದೆ, ಈ ಬೆಂಗಳೂರಿನಲ್ಲಿರತಕ್ಕಂಥ ಅಂಗಡಿಗಳನ್ನು ನೀವು ಸರ್ಕಾರದವರು ವಹಿಸಿಕೊಳ್ಳಿ. ಅವರು ಒಂದು ಸಭೆ ಕೂಡ ಕರೆದರು. ಅವತ್ತಿನ ಸಭೆಯಲ್ಲಿ ನಾನು ಸಲಹೆ ಮಾಡಿದೆ. ನಿಮ್ಮ ಸರ್ಕಾರಕ್ಕೆ ಅಧಿಕಾರ ಇದೆ. ಈ ಅಂಗಡಿಗಳನ್ನು ಕಮ್ಯಾಂಡರ್ ಮಾಡಿಕೊಳ್ಳಿ. ಕಮ್ಯಾಂಡರ್ ಮಾಡಿಕೊಂಡು ಸರ್ಕಾರದ ಮೂಲಕ ನೀವು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳಿದೆ. ನೀವು ನಾನು ಮಾಡಿದಂಥ

ಸಲಹೆಯನ್ನು ಕೇಳಲಿಲ್ಲ. ಇವತ್ತು ಏನು ಆಗಿದೆ? ಇವತ್ತು ನೀವು ನಡೆಸುವುದಕ್ಕೆ ಹೊರಟಿದ್ದೀರಿ. ನಾನು ಅವತ್ತೇ ಹೇಳಿದ್ದೇನೆ. ನೀವು ಬೆಂಗಳೂರಿನಲ್ಲಿ ನಡೆಸಬೇಕು ಎಂದು ಮೊದಲೇ ಹೇಳಿದ್ದೇನೆ. ಅವತ್ತು ನಾನು ಹೇಳಿದಾಗಗ ನಿಮಗೆ ಪಥ್ಯ ಆಯಿತು. ಹಾಗಾದರೆ ಇವತ್ತು ಏಕೆ ಆ ರೀತಿಯಾದಂತಹ ಪರಿಸ್ಥಿತಿಗೆ ಬಂದಿದ್ದೀರಿ ಅದು ಅಷ್ಟೇ ಅಲ್ಲದೆ, ಮಾರಾಟ ಮಾಡತಕ್ಕದ್ದಷ್ಟೇ ಅಲ್ಲದೆ ಹರಾಜು ಮಾಡತಕ್ಕಂಥ ಪದ್ಧತಿ ಏನು ಇದೆ, ಆ ಪದ್ಧತಿಯನ್ನು ಮೊದಲು ಇಡೀ ದೇಶದಲ್ಲಿ ಟೆಂಡರ್ ಕಮ್ ಆಕ್ಷನ್ ಎಂದು ಹೆತ್ತಾರೆ. ಟೆಂಡರ್ ಕಮ್ ಆಕ್ಷನ್ ಎಂದು ಹೇಳಿದರೆ ಒಂದು ಜಿಲ್ಲೆ ಅಥವಾ ಅಂಗಡಿ. ಈಗ ಏರಿಯಾ ಎಂದು ಮಾಡಿದ್ದಾರೆ. ಮೊದಲು ಅಂಗಡಿ ಪ್ರಕಾರ ಎಂದು ಇತ್ತು. ಈಗ ಅಂಗಡಿ ತೆಗೆದು ಏರಿಯಾ ಎಂದು ಮಾಡಿದ್ದಾರೆ. ಮೊದಲು ಅಂಗಡಿ ತಾಲ್ಲೂಕು, ಶೆಡ್ಯೂಲ್ 1,2,3 ಎಂದು ಮಾರಾಟ ಮಾಡುತ್ತಿದ್ದರು. ಈಗ ಅದನ್ನೆಲ್ಲಾ ತೆಗೆದು ಏರಿಯಾ ಎಂದು ಮಾಡಿದ್ದಾರೆ. ಅಂಗಡಿವಾರು ಇಲ್ಲ, ಏರಿಯಾ ಎಂದು ಮಾಡಿದ್ದೀರಿ. ತಾಲ್ಲೂಕು ಹಾಗೂ ಜಿಲ್ಲೆಗೂ ಅವಕಾಶ ಉಂಟು. ಅದನ್ನು ವಿವರವಾಗಿ ನಾನು ಹೇಳಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಏರಿಯಾ ಎಂದು ಫಿಕ್ಸ್ ಮಾಡಿದರು. ಬೆಂಗಳೂರು ನಗರದಲ್ಲಿ ಏಕೆ ಏರಿಯಾ ಎಂದು ಫಿಕ್ಸ್ ಮಾಡಲಿಲ್ಲ? ಬೆಂಗಳೂರು ನಗರಕ್ಕೆ ನಿಮ್ಮ ನೋಟಿಫಿಕೇಷನ್ನಲ್ಲಿ ಜಿಲ್ಲೆ ಎಂದು ಮಾಡಿದ್ದೀರಿ. ಏನು ಕಾರಣ? ಇಡೀ ರಾಜ್ಯದೆಲ್ಲಾ ಕೂಡ, ಬೆಂಗಳೂರಿನಲ್ಲಿ ಹರಾಜು ಆಗುತ್ತಿತ್ತು. ಮೊದಲು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ ಎಂದು ಹೇಳಿ ಈ ಎಕ್ಸೈಸ್ ಹರಾಜನ್ನು ಪ್ರಥಮವಾಗಿ ಅದೂ ಬಹಳ ಮೊದಲು ಮೇ ಒಂದು ಅಥವಾ ಎರಡನೇ ವಾರದಲ್ಲಿ ಬೆಂಗಳೂರು ನಗರದಿಂದ ಹರಾಜು ಪ್ರಾರಂಭ ಆಗುತ್ತಿತ್ತು. ಸ್ವಾಮಿ ಈ ವರ್ಷ ಮೇ ತಿಂಗಳಲ್ಲಿ ಮೊದಲನೆಯದಾಗಿ ಹರಾಜು ಮಾಡುವುದಕ್ಕೆ ಬದಲಾಗಿ ಜೂನ್ 26ಕ್ಕೆ ಹರಾಜು ಮಾಡಿದ್ದೀರಿ. ನಾಲ್ಕು ದಿವಸದಲ್ಲಿ ಜುಲೈ 7ನೇ ತಾರೀಖು ವ್ಯಾಪಾರ ಶುರು ಮಾಡಬೇಕಾದರೆ ಕೇವಲ ನಾಲ್ಕು ದಿವಸದಲ್ಲಿ ಬೆಂಗಳೂರು ನಗರದಲ್ಲಿರತಕ್ಕ ಒಂದು ದೊಡ್ಡ ವ್ಯವಸ್ಥೆಯನ್ನು ಏನು ಮಾಡಿದಿರಿ? ಇಡೀ ರಾಜ್ಯದಲ್ಲಿ ಏನು ಬಳಕೆ ಆಗುತ್ತಾ ಇರತಕ್ಕ ಸಾರಾಯಿಯಲ್ಲಿ ಶೇಕಡಾ 40-50ರಷ್ಟು ಇಲ್ಲಿ ಬಳಕೆ ಆಗುತ್ತಿದೆ. ಅದೆಲ್ಲಾ ನನ್ನ ಹತ್ತಿರ ಅಂಕಿ ಅಂಶಗಳು ಇದೆ. ಅದು ತಕ್ಷಣ ನನ್ನ ಕೈಗೆ ಸಿಗಲಿಲ್ಲ. ಸರ್ಕಾರದ ಎಲ್ಲಾ ಅಂಕಿ ಅಂಶಗಳು ನನ್ನ ಕೈಯಲ್ಲಿ ಇತ್ತು. ಅದನ್ನೇ ನೋಡಿ ನಾನು ಉಲ್ಲೇಖ ಮಾಡಬೇಕಾಗಿತ್ತು. ತಕ್ಷಣ ನನ್ನ ಕೈಗೆ ಅದು ಸಿಗಲಿಲ್ಲ. ಅದರಿಂದ ಇವತ್ತು ಇಲ್ಲಿ ನೀವು ಹರಾಜು ಮಾಡುವುದಕ್ಕೆ ನಾಲ್ಕು ದಿವಸದಲ್ಲಿ ಇಡೀ ಬೆಂಗಳೂರು ನಗರದಲ್ಲಿ ಎಲ್ಲ ಪ್ರಬಲವಾದ ಶಕ್ತಿಗಳು ಇದ್ದಾವೆ, ನಿಮ್ಮನ್ನು ಅಲುಗಾಡಿಸತಕ್ಕ ಶಕ್ತಿಯನ್ನು ಹೊಂದಿರತಕ್ಕವರು ಇದ್ದಾರೆ, ಅಂತಹ ಕಡೆ ನಾಲ್ಕು ದಿವಸದಲ್ಲಿ ಯಾರೂ ಕೂಡ ಅಂಗಡಿ ಇಟ್ಟು ಅಲ್ಲಿ ಸಾರಾಯಿ ಮಾರಾಟ ಮಾಡುವುದಕ್ಕೆ ಸಾಧ್ಯ ಇದೆಯೇ? ಇದು ಗೊತ್ತಿದ್ದರೂ ಸಹ ನೀವು 26ನೇ ತಾರೀಖಿನ ದಿವಸ ಬೆಂಗಳೂರು ನಗರದಲ್ಲಿ ಹರಾಜು ಹಾಕಿದ್ದೀರಿ. ಏನು ಕಾರಣ? ಯಾರು ಇವತ್ತು ಬೃಹದಾಕಾರವಾಗಿ ಬೆಳೆದು, ಇವತ್ತು ಒಂದು ದೈತ್ಯ ಶಕ್ತಿಯಾಗಿ ಮಾರ್ಪಾಟು ಆಗಿದ್ದಾರೋ, ಅವರಿಗೆ ಇನ್ನೂ ಹೆಚ್ಚಿನ ಬಲವನ್ನು ಕೊಡಬೇಕಾಗಿತ್ತು. ನೀವು ಅವರಿಗೆ ಇನ್ನೂ ಹೆಚ್ಚಿನ ಬಲ, ಹೆಚ್ಚಿನ ಆರ್ಥಿಕ ಬಲ ನೀವು ಅವರಿಗೆ ಕೊಡಬೇಕಾಗಿತ್ತು. ಆ ಕಾರಣದಿಂದ ನಾಲ್ಕು ದಿವಸದಲ್ಲಿ ನೀವು ಅವಕಾಶ ಕೊಟ್ಟಿರಿ. ಏನು ಕಾರಣ ಇದಕ್ಕೆ? ಏನು ಕಾರಣ ಎನ್ನತಕ್ಕದ್ದನ್ನು ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಬೇಕು. ಇವತ್ತು ಬಾಕಿ ಬಗ್ಗೆ ಬೆಂಗಳೂರಿನಲ್ಲಿರತಕ್ಕವರು ಬಾಕಿ ಕೊಡಬೇಕು. ಆದ್ದರಿಂದ ಇವರು ತೆಗೆದುಕೊಂಡಿದ್ದಾರೆ. ಹೇಗೆ ಬಾಕಿ ಆಯಿತು, ಏಕೆ ಆಯಿತು? ನಿಮ್ಮ ನಿಯಮಾವಳಿಯಲ್ಲಿ ಏನು ಹೇಳುತ್ತದೆ. ಬಾಂಡ್, ಬ್ಯಾಂಕ್ ಗ್ಯಾರಂಟಿ ಕೊಡಬೇಕು ಮತ್ತು ತಿಂಗಳ ಕಿಸ್ತನ್ನು ಅಡ್ವಾನ್ಸಾಗಿ ಕೊಡಬೇಕು. ಅಡ್ವಾನ್ಸ್

ಜೊತೆಗೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು. ಇಷ್ಟೆಲ್ಲಾ ಇದ್ದರೂ ಕೂಡ ನೀವು ಬಾಕಿ ಆಗುವುದಕ್ಕೆ ಹೇಗೆ ಬಿಟ್ಟಿರಿ? ಇಡೀ ರಾಜ್ಯದಲ್ಲಿ ಎಷ್ಟು ಬಾಕಿ ಇದೆ. ಇವೊತ್ತಿನ ದಿವಸ ರಾಜ್ಯದಲ್ಲಿ ಯಾರ್ಯಾರದ್ದು ಬಾಕಿ ಎಷ್ಟು ಇದೆ ಎನ್ನತಕ್ಕ ವಿವರನ್ನು ಕೊಡಬೇಕು. ಬೆಂಗಳೂರಿನಲ್ಲಿರತಕ್ಕ ಬಾಕಿ ನನಗೆ ಗೊತ್ತಿರುವ ಹಾಗೆ ಸುಮಾರು 15 ರಿಂದ 17 ಕೋಟಿ ರೂಪಾಯಿಯಲ್ಲಿ ಸುಮಾರು ಆರು ಆರೂವರೆ ಕೋಟಿ ಹರಾಜು ಆಗಿರತಕ್ಕದ್ದರಲ್ಲಿ 17 ಅಥವಾ 18 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ. ಇದು ಒಂದು ಕಡೆ. ಇಡೀ ರಾಜ್ಯದಾದ್ಯಂತ 106 ಕೋಟಿ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ. ಈ ಬಾಕಿ ಉಳಿಸಿಕೊಂಡಿರುವುದಕ್ಕೆ ಏನು ಕಾರಣ ಎನ್ನತಕ್ಕದ್ದನ್ನು ನೀವು ತಿಳಿಸಬೇಕಾಗುತ್ತದೆ. ಇವೊತ್ತು ಕಾನೂನು ಜಾರಿಯಾದ ತಕ್ಷಣ ಅದು ಎಲ್ಲಿಯೂ ಜಾರಿಯಾಗಲಿಲ್ಲ. ಬೇಕಾದರೆ ಬನ್ನಿ ತೋರಿಸಿಕೊಡುತ್ತೇನೆ. ಇವರು ಎಂಎಸ್ಐಎಲ್ ಮತ್ತು ಮೈಷುಗರ್ ಕಂಪನಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅನಂತರ, ಅವರು ಜಾಹೀರಾತು ಹೊರಡಿಸುತ್ತಾರೆ. ಏನೆಂದರೆ, ಬಾಟ್ಲಿಂಗ್ ಯೂನಿಟ್ ಇಟ್ಟಿರತಕ್ಕಂಥವರು ಯಾರಿದ್ದಾರೆ, ಅವರಿಗೆ ಲೀಸ್ ಮೇಲೆ ಕೊಡಲಾಗುವುದೆಂದು ಮಾಡಿದರು. 'ಕುರಿಗಳನ್ನು ಕಾಯುತ್ತೀಯಾ ತೋಳ' ಎಂದರೆ 'ಸಂಬಳವಿಲ್ಲದೆ ಕಾಯುತ್ತೇನೆ' ಎಂದು ತೋಳ ಹೇಳಿತಂತೆ. ಹಾಗೆ ಇಡೀ ರಾಜ್ಯದಲ್ಲಿ ಯಾರ್ಯಾರು ಬಾಟ್ಲಿಂಗ್ ಯೂನಿಟ್ಸ್ ಇಟ್ಟುಕೊಂಡಿದ್ದಾರೋ ಅವರಿಗೆ ಸ್ಯಾಚೆಟ್ಸ್ ಕೊಟ್ಟರು. ಇವರದು ಹೆಸರಿಗೆ ಮಾತ್ರ ಮೈಷುಗರ್ ಕಂಪನಿ ಅಥವಾ ಎಂಎಸ್ಐಎಲ್ ಎಂದು ಒಂದು ಬೋರ್ಡ್ ಅಷ್ಟೆ. ಆದರೆ, ಒಳಗಡೆ ಸಂಪೂರ್ಣ ವ್ಯವಹಾರವೆಲ್ಲಾ ಅವರದೇ. ಪುನಃ ಇದೇ ದೈತ್ಯಶಕ್ತಿಯ ನರ್ತನ. ಅವರು ವೆಂಡರ್ಗಳಿಗೆ ಸ್ಯಾಚೆಟ್ಸ್ ಮಾಡಿ ಕೊಟ್ಟರೆ ಉಂಟು ಇಲ್ಲದಿದ್ದರೆ ಇಲ್ಲ. ಹಾಗಾಗಿ ಪ್ರತ್ಯೇಕವಾಗಿ ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಸ್ಯಾಚೆಟ್ಸ್‌ನಲ್ಲಿ ಸಾರಾಯಿ ಮಾರಾಟ ಮಾಡುವುದಕ್ಕೆ ಇವರಿಂದ ಸಾಧ್ಯವಾಗಲಿಲ್ಲ, ಬಲ್ಕ್ ಸಪ್ಲೈ ಮಾಡುವುದಕ್ಕಾಗಲಿಲ್ಲ. ಅವರಿಗೆ ಬೇಕಾದದ್ದು ಅದೇ. ಅಬಕಾರಿ ಇಲಾಖೆಯಲ್ಲಿರುವ ಕೆಲವು ಅಧಿಕಾರಿಗಳೂ ಇವರಿಗೂ ಬಹಳ ಒಳ್ಳೆಯ ನೆಂಟಸ್ತಿಕೆ ಇದೆ. ಅಂತೆಯೇ ಇಲಾಖೆಯಲ್ಲಿ ಪ್ರಾಮಾಣಿಕರಾದಂಥ ಅನೇಕ ಅಧಿಕಾರಿಗಳೂ ಇದ್ದಾರೆ, ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಮೇಲ್ಮಟ್ಟದಲ್ಲಿರುವ ಇಲಾಖೆಯ ಕಾರ್ಯದರ್ಶಿಯವರ ಬಗ್ಗೆಯಾಗಲಿ ಅಥವಾ ಆಯುಕ್ತರ ಬಗ್ಗೆಯಾಗಲಿ ನನಗೆ ಅಪಾರವಾದ ಗೌರವವಿದೆ. ಇವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಆದರೆ, ಕೆಳಮಟ್ಟದಲ್ಲಿರುವ ಕೆಲವು ಅಧಿಕಾರಿಗಳಿಗೂ ಇವರಿಗೂ ಒಳ್ಳೆಯ ನೆಂಟಸ್ತಿಕೆ ಇದೆ. ಇಲಾಖಾಧಿಕಾರಿಗಳಾಗಿರತಕ್ಕಂಥವರು ಏನು ಮಾಡಿದರೆಂದರೆ, ನಿಮಗೆ ಸ್ಯಾಚೆಟ್ಸ್ನಲ್ಲಿ ಸಾರಾಯಿ ಒದಗಿಸುವುದಕ್ಕೆ ನಮ್ಮಿಂದಾಗುವುದಿಲ್ಲ, ಬಲ್ಕ್‌ನಲ್ಲೂ ಕೊಡುವುದಕ್ಕೂ ಆಗುವುದಿಲ್ಲ'ಎಂದು ಒಂದು ಸರ್ಟಿಫಿಕೇಟ್ ಕೊಟ್ಟರು. ಆ ಸರ್ಟಿಫಿಕೇಟ್ ಆಧಾರದ ಮೇಲೆ ಅಷ್ಟಕ್ಕೆ ಇವೊತ್ತು ಕಿಸ್ತು ವಜಾ ಆಗುತ್ತಿದೆ. ಕಿಸ್ತು ಎಷ್ಟೆಂಬುದನ್ನು ಲೆಕ್ಕ ಹಾಕುವುದಕ್ಕೆ ಇವರಿಂದ ಸಾಧ್ಯವಾಗುತ್ತಿಲ್ಲ, ನನಗಂತೂ ಅದರ ಲೆಕ್ಕ ಸಿಕ್ಕಿಲ್ಲ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬುದರ ಬಗ್ಗೆ ತಾವು ವಿವರಣೆ ನೀಡಬೇಕಾಗುತ್ತದೆ. ಕಿಸ್ತನ್ನು ನೀವು ಬಾಕಿ ಇಟ್ಟುಕೊಂಡಿರುವ ಕಾರಣದಿಂದ ಅವರಿಗೆ ನೀವು ಸಾರಾಯಿಯನ್ನು ಪೂರೈಸುವುದಕ್ಕೆ ಆಗಲಿಲ್ಲ. ಆದುದರಿಂದ, ಸರ್ಕಾರಕ್ಕೆ ಬಾಕಿ ಬರಬೇಕಾಗಿರತಕ್ಕಂಥ ಕಿಸ್ತು ಈ ವರ್ಷ ಎಷ್ಟು ಹೋಗುತ್ತದೆನ್ನುವುದರ ಲೆಕ್ಕವನ್ನು ತಾವು ಕೊಡಬೇಕಾಗುತ್ತದೆ. ಅಷ್ಟೇ ಅಲ್ಲದೆ, ಈಗ ಕೇಂದ್ರ ಸರ್ಕಾರ ಮೊಲಾಸಸ್ ಅನ್ನು ಡಿ-ಕಂಟ್ರೋಲ್ ಮಾಡಿದೆ. ಮೊದಲು ಅದು ಎಕ್ಸೈಸ್ ಕಮಾಡಿಟಿ ಆಗಿತ್ತು.

ಅಧ್ಯಕ್ಷರು : ಬೈರೇಗೌಡರೇ, ತಾವು ಹೇಳುವುದನ್ನು ಸ್ವಲ್ಪ ಸಂಕ್ಷಿಪ್ತ ಮಾಡಿ ಹೇಳಿದರೆ ಉತ್ತಮ. ಈ ವಿಷಯದ ಬಗ್ಗೆ ತಮಗೆ ಆಳವಾದ ಜ್ಞಾನವಿರುವುದರಿಂದ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಯಾವುದೇ ವಿಷಯವನ್ನು ಲಂಬಿಸಿಕೊಂಡು ಹೋಗುತ್ತಿಲ್ಲ. ಎಷ್ಟು ಹೇಳಬೇಕೋ ಅಷ್ಟನ್ನು ಹೇಳುತ್ತೇನೆ. ಆದುದರಿಂದ, ತಾವು ದಯವಿಟ್ಟು ಸಹಕರಿಸಬೇಕು. ಈಗ ಮೊಲಾಸಸ್ ಡಿ-ಕಂಟ್ರೋಲ್ ಆಗಿದೆ. ಡಿ-ಕಂಟ್ರೋಲ್ ಆಗುವುದಕ್ಕಿಂಥ ಮೊದಲು ಮೊಲಾಸಸ್ ಒಂದು ಟನ್ನಿಗೆ ರೂ.1.50, ರೂ. 200 ಇದ್ದುದು ಡಿ-ಕಂಟ್ರೋಲ್ ಆದನಂತರ ಟನ್ನಿಗೆ ರೂ. 2,000 ನಿಂದ 2,5000 ವರೆಗೆ ಹೋಗಿದೆ. ಇದರಿಂದ ಏನಾಯಿತೆಂದರೆ, 16 ರೂಪಾಯಿಗಳಿಗೆ ಸಾರಾಯಿ ಕೊಡುತ್ತೇವೆಂದು ನೀವು ಹೇಳಿದ್ದೀರಿ, You have committed. ಇವರು 16 ರೂಪಾಯಿಗೆ ಸಾರಾಯಿ ಕೊಡುವುದಕ್ಕೆ ಸಾಧ್ಯವಿಲ್ಲ. ಈಗ ಇವರಿಗೆ ರೆಕ್ಟಿಫೈಡ್ ಸ್ಪಿರಿಟ್ ಸಿಗಲಿಲ್ಲ. ಆದ್ದರಿಂದ, ಡಿಸ್ಟಿಲರಿಯವರೆಲ್ಲಾ ಸೇರಿಕೊಂಡು ಮೊಲಾಸಸ್ ಅನ್ನು ಮುಕ್ತ ಮಾರುಕಟ್ಟೆಯಲ್ಲಿ ಕೊಂಡುಕೊಳ್ಳಬೇಕು. ಆಗ ಬೆಲೆ ಜಾಸ್ತಿಯಾಯಿತು. ಇವರಿಗೆ ಯಾವ ಬೆಲೆಯಲ್ಲಿ ಮೊಲಾಸಸ್ ಅನ್ನು ಕೊಡಬೇಕಾಗಿತ್ತೋ, ಮತ್ತು ಸಾರಾಯಿ ತಯಾರಿಸುವುದಕ್ಕಾಗಲಿ ಅಥವಾ ಐಎಂಎಫ್ಎಲ್ ತಯಾರಿಸುವುದಕ್ಕಾಗಲಿ ಇವರ ಹತ್ತಿರ ರೆಕ್ಟಿಫೈಡ್ ಸ್ಪಿರಿಟ್ ಇರಲಿಲ್ಲ. ಆದರೆ, ಅವರುಗಳಿಗೆ (ಮಾರಾಟಗಾರರು) ಬೇಕಾದಷ್ಟು ರೆಕ್ಟಿಫೈಡ್ ಸ್ಪಿರಿಟ್ ಸಿಗುತ್ತಿದೆ. ಇವೊತ್ತಿನ ದಿವಸ ಇದರಿಂದ ಸಾರಾಯಿಯನ್ನು ಸರಬರಾಜು ಮಾಡುವುದಕ್ಕಾಗಲಿಲ್ಲ. ಇವರು ಕೆಲವು ಕಡೆ ಹೋಗಿ 8 ರೂ. ಅಥವಾ 12 ರೂಪಾಯಿಗಳಿಗೆ ಸ್ಯಾಚೆಟ್ಸ್ನಲ್ಲಿ ಸಾರಾಯಿಯನ್ನು ಸರಬರಾಜು ಮಾಡಬೇಕೆಂದು ಜಬರ್ದಸ್ತ್ ಮಾಡಿ ಕೇಳಿದರು. ನಂತರ, ಇವರು ಕೋರ್ಟಿಗೆ ತೆರಳಿ ತಮ್ಮನ್ನು ಮುಟ್ಟಕೂಡದು ಎಂಬಂತೆ ಆಜ್ಞೆ ತಂದರು. ಈ ಎಲ್ಲಾ ಕಾರಣಗಳಿಂದ ಸರ್ಕಾರಕ್ಕೆ ಇವೊತ್ತು ಇದರಿಂದ ಎಷ್ಟು ನಷ್ಟವಾಗಿದೆ ಎಂಬುದನ್ನು ತಿಳಿಸಬೇಕು. ಮತ್ತು ಸುಸ್ತಿದಾರರ (ಡಿಫಾಲ್ಟರ್ಸ್) ಬಗ್ಗೆ ನಾನು ಆಗಲೇ ಹೇಳಿದೆ. ಯಾರು ಸುಸ್ತಿದಾರರಾಗುವರು ಎಂಬುದರ ಬಗ್ಗೆ ನಿಯಮದಲ್ಲಿದೆ. ಮಾನ್ಯ ಅಧ್ಯಕ್ಷರು, ಇದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಬೇಕೆಂದು ಹೇಳಿರುವುದರಿಂದ ನಾನು ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಯಾರು ಸುಸ್ತಿದಾರರಾಗಿದ್ದಾರೋ ಅವರು ಹರಾಜಿನಲ್ಲಿ ಬಿಡ್ ಮಾಡಬಾರದೆಂಬುದಾಗಿ ಕಾನೂನು ಇದೆ. ಆ ರೀತಿ ಅವನು ಡಿಫಾಲ್ಟರ್ ಎಂದು ಗೊತ್ತಿದ್ದರೂ ಸಹ ಅಂಥ ಡಿಫಾಲ್ಟ್ರ್ ಯಾರು ಇದ್ದಾರೆ ಅವನನ್ನು ಹರಾಜಿನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ, ಒಂದು ಚಕ್ಕು ಕೊಟ್ಟುಬಿಡುತ್ತಾರೆ, ಅಬ್ಕಾರಿ ಇಲಾಖೆಯಲ್ಲಿಯೇ ನಿಯಮವಿದೆ, ಚಕ್ ಹಣವಲ್ಲ, ಅದು ಪ್ರಾಮಿಸ್ ಟೂ ಪೇ ಮಾತ್ರ. ಅದು ರಿಯಲೈಸ್ ಆಗಿ ಬರುವವರೆಗೆ ಅದು ಕ್ಯಾಷ್ ಆಗುವುದಿಲ್ಲ. ಅದು ರಿಯಲೈಸ್ ಆಗುವವರೆಗೂ ಅವನು ಬಾಕಿದಾರನೇ ಆಗಿರುತ್ತಾನೆ. ಆದರೂ ಸಹ ಹಕ್ಕಿನ ಆಧಾರದ ಮೇಲೆ ಅವನು ಬಾಕಿದಾರನಲ್ಲವೆಂದು ಕೆಲವು ಕಡೆ ಸರ್ಟಿಫೀಕೇಟನ್ನು ಕೊಟ್ಟರು. ಅನೇಕ ಕಡೆ ಈ ಸರ್ಟಿಫಿಕೇಟ್ ಸೃಷ್ಟಿಯೂ ಸಹ ಆಯಿತು. ಎನ್.ಒ.ಸಿ. ಗಳ ಸೃಷ್ಟಿಯೂ ಸಹ ಆಯಿತು. ಒಂದು ಕಡೆ ಚಕ್ಕನ್ನು ಕೊಟ್ಟಿರುವ ಕತೆಯನ್ನು ಇವತ್ತಿನ ದಿವಸ ಹೇಳುತ್ತೇನೆ. ಈ ರೀತಿ ಬಹಳಷ್ಟು ಆಗಿದೆ. ಇದನ್ನು ಇವರು ಸಭೆಯನ್ನು ಕರೆದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತಂದೆ. 1991-92ರಲ್ಲಿ ರವಿಕುಮಾರ್ ಟ್ರೇಡರ್ಸ್ ಡಿಫಾಲ್ಟರ್ಸ್. ಇವರು 2 ಕೋಟಿ 11 ಲಕ್ಷ ಒಂದು ಸಾವಿರ ರೂಪಾಯಿಗೆ 22-9-92ರಲ್ಲಿ ಬೆಂಗಳೂರಿನ, ಶಾಂತಿನಗರದ, ವಿಜಯಬ್ಯಾಂಕ್ ಬ್ರಾಂಚ್ನ ಚೆಕ್ನ್ನು ಕೊಟ್ಟರು. ಇದು ಎನ್‌ಕ್ಯಾಷ್ ಆಗಲಿಲ್ಲ. ಬೌನ್ಸ್ ಆಯಿತು. ಇದು ಒಂದೂ ಎರಡು ರೂಪಾಯಿಗಳಲ್ಲ. ಒಂದು ಸಲ ಸಭೆಯನ್ನು ಕರೆದಂಥ ಸಮಯದಲ್ಲಿ ಈ ರೀತಿ ಬೌನ್ಸ್‌ಆಗಿದೆಯೆಂದು ಮುಖ್ಯಮಂತ್ರಿಗಳ ಗಮನಕ್ಕೆ ಸಹ ತಂದೆ, ಇದರ ಬಗ್ಗೆ ಏನು ಮಾಡಿದ್ದೀರಿ? ಆ ಅಧಿಕಾರಿ ಯಾರು? ಏಕೆ? ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದೆ, ಆಗ ನನ್ನ ಮುಂದೆ ಅದೇನೆಂದು ನೋಡಿ ಎಂದು ಹೇಳಿದರು, ಅನಂತರ ಅದನ್ನು ನೋಡಿದರೋ ಬಿಟ್ಟರೋ ನನಗೆಗೊತ್ತಿಲ್ಲ,

ಅನಂತರ ಅದೇನಾಯಿತೋ ನನಗೆ ಗೊತ್ತಿಲ್ಲ. ಇದೇ ರೀತಿ ಒಂದಲ್ಲ, ಚೆಕ್‌ನ್ನು ಕೊಟ್ಟರೆ ಅನೇಕ ಕಛೇರಿಗಳಲ್ಲೇನಾಗಿದೆ ಎಂದರೆ, ಅದು ಎನ್ಕ್ಯಾಷ್ಮೆಂಟ್‌ಗೆ ಅದು ಎಕ್ಸ್‌ಪೈರಿ ಆಗುವವರೆಗೆ ಕೊಡಲಿಲ್ಲ. ಅದನ್ನು ಕಛೇರಿಯಲ್ಲಿಯೇ ಇಟ್ಟುಕೊಂಡಿದ್ದರು. ಅದರ ಕರೆನ್ಸಿ ಮುಗಿದ ಮೇಲೆ ಆ ಚೆಕ್‌ನ್ನು ವಾಪಸ್ ಕೊಡುವುದು. ಈ ರೀತಿಯಾಗಿ ಈ ಸರ್ಕಾರಕ್ಕೆ ಬರಬೇಕಾಗಿರತಕ್ಕ ಹಣವು, ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳ ಬೇಜವಾಬ್ದಾರಿತನದಿಂದ, ಇವರುಗಳು ಇದರಲ್ಲಿ ಶಾಮಿಲಾಗಿ ಇವತ್ತು ನೂರಾರು ಕೋಟಿ ರೂಪಾಯಿಗಳಷ್ಟು ಹಣ ಇದರಲ್ಲಿ ಹೋಗುತ್ತಿದೆ, ಹೋಗಿದೆ. ಆದ್ದರಿಂದ ಇವತ್ತು ಈ ಕಾನೂನನ್ನು ಮಾಡಿ ಏನು ಸಾಧನೆಯನ್ನು ಮಾಡಬೇಕೆಂದು ಹೇಳುತ್ತಿದ್ದರೋ ಆ ಉದ್ದೇಶವೇನಿದೆ ಅದು ಕಾರ್ಯರೂಪ ಮಾಡತಕ್ಕ ಸಮಯದಲ್ಲಿ ಸಫಲವಾಗಲಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗೆ ನೀವು ಭೀಮನು, ಅರ್ಜುನನು ಅಲ್ಲ ಉತ್ತರ ಕುಮಾರರಾದಿರೆಂದು ನಾನು ಅದೇ ಕಾರಣದಿಂದ ಹೇಳಿದ್ದೇನೆ. ತಾವು ಉತ್ತರವನ್ನು ಕೊಡತಕ್ಕದ್ದರಲ್ಲಿ ನೀವು ಭೀಮನೋ ಅಥವಾ ಅರ್ಜುನನೋ ಆದರೆ ಪ್ರಥಮವಾಗಿ ಯಾರು ಸಂತೋಷವನ್ನು ಪಡುತ್ತಾರೋ ಅದರಲ್ಲಿ ಮೊದಲನೆಯವನು ನಾನು, ನನ್ನನ್ನು ಸಂತೋಷಪಡಿಸುತ್ತೀರೋ ಅಥವಾ ನಿರಾಸೆಪಡಿಸುತ್ತೀರೋ ಎಂಬುದನ್ನು ತಮ್ಮ ಉತ್ತರದಲ್ಲಿ ನಿರೀಕ್ಷೆ ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿರಿಯ ಸದಸ್ಯರಾದ ಮಾನ್ಯ ಏಕಾಂತಯ್ಯನವರು ಕಾನೂನಿನ ವಿರೋಧವಾಗಿ ಈ ಬಿಲ್ಲನ್ನು ತಂದ ಬಗ್ಗೆ ವಿವರವಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ನನಗನ್ನಿಸುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ, ಅದನ್ನು ಒಪ್ಪಿಕೊಂಡು ಕಾನೂನನ್ನು ಮಾಡುವಾಗಲೇ ಅದನ್ನು ಭಂಗಮಾಡುವುದು ಸರಿಯಲ್ಲ, ಕಾನೂನನ್ನು ಮಾಡುವಾಗ ಕಾನೂನನ್ನು ಅನುಕರಣೆ ಮಾಡಿ ಕಾನೂನಿನ ರೀತಿ ನಾವು ಕಾನೂನನ್ನು ಮಾಡಿದರೆ ಅದರ ಪ್ರಯೋಜನವಾಗುತ್ತದೆ. ಕಾನೂನನ್ನು ಮಾಡುವವರೇ ಕಾನೂನನ್ನು ಮುರಿದರೆ, ಭಂಗಮಾಡಿದರೆ ಇದು ಸರಿಯಲ್ಲ. ತಾಂತ್ರಿಕವಾದಂಥ ದೋಷಗಳನ್ನು ಸರಿಪಡಿಸಿಕೊಂಡು ನಾಳೇ ದಿನವೇ ಇದನ್ನು ಮಾಡಿಕೊಳ್ಳಬಹುದು. ಇದರಲ್ಲಿ ಇರತಕ್ಕ ತಿದ್ದುಪಡಿಗಳ ಬಗ್ಗೆ, ವಿಷಯಗಳ ಬಗ್ಗೆ ಯಾರದ್ದೂ ಆಕ್ಷೇಪಣೆ ಇಲ್ಲ. ಸಾರ್ವಜನಿಕರ ಮತ್ತು ಸರ್ಕಾರದ ದೃಷ್ಟಿಯಿಂದ ಆ ತಿದ್ದುಪಡಿಯನ್ನು ನಾವೆಲ್ಲಾ ಸ್ವಾಗತ ಮಾಡುತ್ತಿದ್ದೇವೆ. ಆದರೆ ಆ ಆರ್ಡಿನೆನ್ಸನ್ನು ತಂದು ಸಕಾಲದಲ್ಲಿ ಆ ಬಿಲ್ಲನ್ನು ಪಾಸ್ ಮಾಡಿಕೊಳ್ಳತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ. ಸರ್ಕಾರದ ವಿರುದ್ಧ ಆಡಳಿತ ಪಕ್ಷದಿಂದಲೇ ನಡೆಯಬಾರದಂತಹ ಘಟನೆ ನಡೆದುಹೋಯಿತು. ಈ ಒಂದು ಕಾರಣದಿಂದ ಅದು ಸಕಾಲದಲ್ಲಿ ಪಾಸಾಗದೇ ಹೋಯಿತು. ಮತ್ತೊಂದು ಆರ್ಡಿನ್ಸ್ ತಂದಿದ್ದಾರೆ. ಅದು ಕಾನೂನಿಗೆ ವಿರುದ್ಧವಾಗಿದೆ. ಇದನ್ನು ವಾಪಸ್ಸು ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳು ನಾಳೆ ಮತ್ತೊಂದು ಬಿಲ್ಲನ್ನು ಸರಳವಾಗಿ ಮಂಡಿಸಿದರೆ, ಅದನ್ನು ನಾವು ಪಾಸ್ ಮಾಡಬಹುದು. ನಾವು ಕಾನೂನಿಗೆ ಬೆಲೆಯನ್ನು ಕೊಟ್ಟರೆ ಅದರ ಪ್ರಯೋಜನ ನಮ್ಮ ರಾಜ್ಯಕ್ಕೆ ಆಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ನಾವು ಎಕ್ಸೈಸ್ ಲಾಬಿಗೆ ಮಣಿಯುವುದಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಮಾನ್ಯ ಭೈರೇಗೌಡರು ಇದರ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಈ ವಿವರಗಳನ್ನು ನೋಡಿದರೆ ಕಟ್ಟು ಬಾಕಿದಾರರಿಗೆ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ, ಹಾಗಾದರೆ ಅವರಿಗೆ ಅವಕಾಶ ಮಾಡಿಕೊಟ್ಟ ಕಾರಣವೇನು? ಈ ವಿಷಯವಾಗಿ ರಾಜ್ಯದ ಜನತೆಗೆ, ಈ ಸದನದ ಸದಸ್ಯರುಗಳಿಗೆ ಸಂಶಯಾಸ್ಪದವಾಗಿದೆ. ಅದು ಕಾನೂನಿನಲ್ಲಿ ಮಾಡಿದ್ದರೆ ಸ್ವಾಗತಾರ್ಹ. ಯಾರು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕು. ಅವರು ಬಿಡ್ ಮಾಡಬಾರದು, ಎಂದಿದ್ದರೂ ಅವರು ಹರಾಜಿನಲ್ಲಿ ಭಾಗವಹಿಸಿದಂತಹ ನಿದರ್ಶನ ಇದೆ. ಅದಕ್ಕೆ ಕಾರಣವೇನು? ಯಾವ ಕಾರಣಕ್ಕಾಗಿ ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಿ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು

ತಿಳಿಸಬೇಕು. ಕಾನೂನಿನಲ್ಲಿ ಇಲ್ಲದಿರುವುದನ್ನು ಅಂದರೆ ಚೆಕ್ ಕೊಟ್ಟರೆ ಅವರು ಬಾಕಿದಾರರು ಆಗಲಿಲ್ಲವೇ? ಹಣ ಬಂತು ಜಮಾ ಆಯಿತು. ಆದನಂತರ ಅವರು ಕಟ್ಟು ಬಾಕಿದಾರರು ಆಗಲಿಕ್ಕಿಲ್ಲ. ಹಾಗೆ ಚೆಕ್ಗಳನ್ನು ಸೃಷ್ಟಿಸಿ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಬರುವಂತವರಿಗೆ ಅವಕಾಶ ಮಾಡಿಕೊಟ್ಟರೆ ಇದು ಈ ರಾಜ್ಯದ ಜನತೆಗೆ ಸಂಶಯ ಮೂಡಿಸುವಂಥಾದ್ದು, ಅದಕ್ಕೆ ಇದರ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಬೆಳಕನ್ನು ಚೆಲ್ಲಬೇಕು. ಇದನ್ನು ವಾಪಸ್ಸು ತೆಗೆದುಕೊಂಡು ಪುನಃ ಸರಿಯಾದಂತಹ ಕಾನೂನು ಬದ್ಧವಾದಂತಹ ಬಿಲ್ಲನ್ನು ಮಂಡಿಸಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈಗ ಈ ಸದನದ ಮುಂದೆ ತಂದಿರುವಂತಹ ಕರ್ನಾಟಕ ಅಬ್ಕಾರಿ ತಿದ್ದುಪಡಿ ಮಸೂದೆ 1993 ಬಗ್ಗೆ ವ್ಯಾಪಕವಾದಂತಹ ಬೆಳಕನ್ನು ಮಾನ್ಯ ಸದಸ್ಯರು ಇಲ್ಲಿ ಚೆಲ್ಲಿದ್ದಾರೆ. ಇದಕ್ಕೆ ನಾನು ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ತಿದ್ದುಪಡಿ ಮಸೂದೆಗೆ ವ್ಯಾಪಕವಾದಂತಹ ಒಂದು ಸ್ವಾಗತ ನೀಡಿದೆ. ಆದರೆ ಮಾನ್ಯ ಏಕಾಂತಯ್ಯನವರು ಕೆಲವು ತಾಂತ್ರಿಕಾದ ಪ್ರಶ್ನೆಗಳನ್ನು ಎತ್ತಿ, ಕೆಲವು ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗ ಮಾನ್ಯ ಏಕಾಂತಯ್ಯನವರು ತಾತ್ವಿಕವಾಗಿ ಹೇಳಿದಂತಹ ಮಾತನ್ನು ನಾನು ಒಪ್ಪುತ್ತೇನೆ. ಅದೇನೆಂದರೆ ಸುಗ್ರೀವಾಜ್ಞೆಯಿಂದ ರಾಜ್ಯವನ್ನು ಆಳಬಾರದು ಸುಗ್ರೀವಾಜ್ಞೆ ಅತಿ ಅಗತ್ಯವೆಂದು ಕಂಡುಕೊಂಡಾಗ ಮಾತ್ರ ಇಂಥ ಸುಗ್ರೀವಾಜ್ಞೆಯನ್ನು ಮಾಡಬೇಕೆಂದು ಅದು ಇರಬೇಕಾಗುತ್ತದೆ. ಅದರ ಬಗ್ಗೆ ಮಾವಲಂಕರ್ ಅವರು ಒಂದು ಪತ್ರವನ್ನು ಅಂದಿನ ಪ್ರಧಾನಮಂತ್ರಿಯವರಾಗಿದ್ದ ಜವಹರಲಾಲ್ ನೆಹರು ಅವರಿಗೆ ತಿಳಿಸಿದ್ದಾರೆ. ಜವಹರಲಾಲ್ ನೆಹರೂರವರು ಉತ್ತರ ಕೊಟ್ಟಿರುವುದನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

"I think all of my colleagues will agree with me that issue of ordinance is not only desirable and should be avoided except on special and urgent occasions. As to when such an occasion may or may not arise, it is a matter of judgment. Not only the Government of the State but private Members of Parliament are continually urging that new legislation should be passed. The Parliamentary procedure is sufficient to give the fullest opportunities for consideration and debate and to check errors and mistakes creeping in. That is obviously desirable. All these involves considerable delay. The result is that important legislation is held up. Every Parliament in the World has to face this difficult problem. Various proposals have been made to over come them."

7.00 ಪಿ.ಎಂ

ಈ ಉತ್ತರವನ್ನು ಕೂಡ ಜವಹರ್ಲಾಲ್ ನೆಹರೂರವರು ಕೊಟ್ಟಿದ್ದಾರೆ. ಆದುದರಿಂದ ತಾವು ಏನು ತಾತ್ವಿಕವಾದಂತಹ ಸುಗ್ರೀವಾಜ್ಞೆಯನ್ನು ಕಡಿಮೆ ಮಾಡಬೇಕು, ಅದನ್ನು ಅನಾವಶ್ಯಕವಾಗಿ ಉಪಯೋಗ ಮಾಡಬಾರದು ಎನ್ನುವಂತಹ ಒಂದು ಸಲಹೆಯನ್ನು ಕೊಟ್ಟಿದ್ದೀರಿ. ಅದಕ್ಕೆ ನೂರಕ್ಕೆ ನೂರು ಪಾಲು ನಾವು ಬದ್ಧನಾಗಿರುತ್ತೇವೆ. ಅದನ್ನು ಸ್ವೀಕಾರ ಕೂಡ ಮಾಡುತ್ತೇವೆ. ನಾವು ಕೆಲವು ಸಾರಿ ಕೆಲವು ಇತಿಹಾಸವನ್ನು ಕೂಡ ಇಲ್ಲಿ ಹೇಳಬೇಕಾಗುತ್ತದೆ. 1993ನೇ ಇಸವಿಯಲ್ಲಿ ಬಂದಂತಹ ಸುಗ್ರೀವಾಜ್ಞೆ ಆರ್ಡಿನೆನ್ಸ್ 18. 1986ರಲ್ಲಿ ನಿಮ್ಮ ಪಕ್ಷದವರು ಈ ಕಡೆ ಇದ್ದಿರಿ, ನಾವು ಆ ಕಡೆ ಇದ್ದೆವು. ನಾವು ಕೂಡ ಸುಗ್ರೀವಾಜ್ಞೆಯನ್ನು ಕೊಟ್ಟಾಗ ವಿರೋಧ ಕೂಡ ಮಾಡಿದ್ದು ಇದೆ.

ಅದು ವಿರೋಧ ಪಕ್ಷದಲ್ಲಿ ಇದ್ದು ಸುಗ್ರೀವಾಜ್ಞೆ ಬಗ್ಗೆ ಈಗಿನ ಪ್ರಜಾಪ್ರಭುತ್ವ ಎಂದು ಹೇಳಿದರೆ Vigilance is the price which we should pay for the Democracy So, the viligance is the thing which the Opposition will have to be always vigilant.

ಆ ಕೆಲಸ ತಾವು ಮಾಡಿದ್ದೀರಿ. ತಾವು ಕರ್ತವ್ಯ ನಿಭಾಯಿಸಿದ್ದೀರಿ. ಅದಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದೀರಿ. ಆ ಎಚ್ಚರಿಕೆಗೆ ಸ್ಪಂದಿಸತಕ್ಕಂತಹ ಸರ್ಕಾರ ಈ ಕಡೆ ನಾವು ಇದ್ದೇವೆ. ಆದರೆ ಇದು ಯಾವ ಪರಿಸ್ಥಿತಿಯಾಗುತ್ತದೆ ಎಂದು ಗೊತ್ತಿದೆ. 1984ರಲ್ಲಿ 21 ಆರ್ಡಿನೆನ್ಸ್ ಆಗಿದೆ. 1985ರಲ್ಲಿ 20 ಆರ್ಡಿನೆನ್ಸ್ ಆಗಿದೆ. 1986ರಲ್ಲಿ 18 ಆರ್ಡಿನೆನ್ಸ್ ಆಗಿದೆ. As against that, ನನ್ನ ಸರ್ಕಾರ 15 ಆರ್ಡಿನೆನ್ಸ್ ಮಾತ್ರ ಮಾಡಿದೆ. ಅದನ್ನು 15ಕ್ಕಿಂತ ಕಡಿಮೆ ಮಾಡೋಣ. ಈ 15 ಮಾಡೋದು ಕೂಡ ನನ್ನ ದೃಷ್ಟಿಯಲ್ಲಿ ಕಡಿಮೆ ಮಾಡಬೇಕು. ತಾವು ಆಲೋಚನೆ ಮಾಡಬೇಕು. ಜನವರಿಯಿಂದ ಇನ್ನು ಮುಂದೆ ಕೂಡ ನಾವು ಅದಷ್ಟು ಕಡಿಮೆ ಮಾಡಿ ಸದನಕ್ಕೆ ಮುಂದೆ ಬಂದ ನಮ್ಮ ಕಾನೂನುಗಳನ್ನು ಮಾಡತಕ್ಕಂತಹ ಒಂದು ಪರಿಪಾಠವನ್ನು ಅನುಸರಿಸಲಿಕ್ಕೆ ನಾವೆಲ್ಲಾ ಪ್ರಯತ್ನ ಮಾಡುತ್ತೇವೆ. ಆದುದರಿಂದ ಇದರ ಬಗ್ಗೆ ಪ್ರತಿಷ್ಠೆ ಏನಿಲ್ಲ. ತಾವೂ ಒಂದು ಪ್ರಶ್ನೆ ಎತ್ತಿದ್ದೀರಿ. ಪ್ರತಿಷ್ಠೆಯಿಂದ ನಾನು ಅದನ್ನು ವಿರೋಧ ಮಾಡಬೇಕು ಅದಕ್ಕೆ ವಿರುದ್ಧ ವಾದ ಮಾಡಬೇಕು ಎಂಬ ವಾದಕ್ಕೆ ಪುಷ್ಟಿಯಾಗಿ ಈ ಸಂಖ್ಯೆಯನ್ನು ಕೊಟ್ಟಿದ್ದಲ್ಲ. ಆದರೆ ಸದನದ ಮತ್ತು ಸದನದ ಹೊರಗೆ ಇರತಕ್ಕಂತಹ ನಮ್ಮ ಧ್ವನಿಗಳು ಈ ವಿಚಾರವನ್ನು ಎಲ್ಲರೂ ಕೂಡ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು ಎಂಬ ಒಂದು ಉದ್ದೇಶದಿಂದ ನಾನು ಅದನ್ನು ಹೇಳಿದ್ದೇನೆ. ಒಮ್ಮೆ ಸುಗ್ರೀವಾಜ್ಞೆ, ಆ ಸುಗ್ರೀವಾಜ್ಞೆ ಮೇಲೆ ಮತ್ತೊಂದು ಸುಗ್ರೀವಾಜ್ಞೆ, ಇದು ಬಹಳ ತಪ್ಪು ಎಂದು ಹೇಳಿದ್ದೀರಿ. ಇದು ಕೆಲವು ಸಂದರ್ಭದಲ್ಲಿ ನಡೆಯುತ್ತದೆ. ಅದನ್ನು ನಾವು ಬಹಳ ಸ್ಪೇರಿಂಗ್ ಆಗಿ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಅದನ್ನು ನಾವೇನಾದರೂ ಮಾಡಿದ್ದೇವಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾಡಿದ್ದೀರಿ, ಅದು ಇದೆ. 84ರಲ್ಲಿ 6 of 84 ಎಂದು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಆರ್ಡಿನನ್ಸ್ ಮಾಡಿದ್ದೀರಿ, ಅದನ್ನು ಪುನಃ 11 of 84 ಎಂದು ಹೇಳಿ ಮರು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದೀರಿ. ಕರ್ನಾಟಕ ಲ್ಯಾಂಡ್ ರೆವಿನ್ಯೂ ಅಮೆಂಡ್ಮೆಂಟ್ ಆರ್ಡಿನನ್ಸ್ 84 ತಂದಿದ್ದೀರಿ. ನೈನ್ ಆಫ್ 84 ಎಂದು ಹೇಳಿ ಸೆಕೆಂಡ್ ಆರ್ಡಿನನ್ಸ್ ಕೂಡ ಇಷ್ಯೂ ಮಾಡಿದ್ದೀರಿ. It is only to set right....

ಶ್ರೀ ಹೆಚ್. ಏಕಾಂತಯ್ಯ : ನೀವು ಹೇಳುವ ಮಾತು ವಸ್ತು ಸ್ಥಿತಿಗೆ ವಿರುದ್ಧವಾಗಿದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ಕ್ಷಮಿಸಿ, ನಾವು ಮಾಡಿದ್ದೇವೆ, ಆದರೆ ನಾವು ಕೇಳುತ್ತಿದ್ದೇನೆ, ಸಭೆಯ ಮುಂದೆ ಇಟ್ಟ ಮೇಲೆ ಸಭೆ ಕಳೆದ ಮೇಲೆ ನಾವು ಇದನ್ನು ಮಾಡಿದ್ದೇವೆಯೇ? ದಯವಿಟ್ಟು ಇದನ್ನು ನೋಡಿ ಹೇಳಿಬಿಡಿ.

Sri M. Veerappa Moily : Let us not go into this kind of an argument. ಅದು ಆಗಿದೆ, ದಯಮಾಡಿ ಸುಮ್ಮನೆ.

ಶ್ರೀ ಹೆಚ್. ಏಕಾಂತಯ್ಯ : ನಾನು ತಮ್ಮನ್ನು ಕೇಳುತ್ತೇನೆ, ನನ್ನದೇನೂ ತಕರಾರು ಇಲ್ಲ. ತಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಮ್ಮದೇನೂ ತಕರಾರಿಲ್ಲ. ನಾನು ತಮ್ಮ ಕ್ಷಮೆ ಕೇಳುತ್ತೇನೆ, ನನ್ನದು ತಪ್ಪು ಆಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. I have verified it. If I am wrong ಖಂಡಿತವಾಗಿಯೂ ಸಹ ತಪ್ಪಾಗಿದ್ದರೆ ನನಗೆ ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ನಾನು ಯಾವುದೇ ಪ್ರಿನ್ಸಿಪಲ್ ಮೇಲೆ ನಿಂತಿಲ್ಲ.

ನಾನು ತಮಗೆ ಕೇಳುತ್ತಿರುವುದು ಏನು ನಾವು ಒಂದು ಸುಗ್ರೀವಾಜ್ಞೆಯನ್ನು ಮಾಡಿ ಅದನ್ನು ನೋಟಿಫೈ ಮಾಡಿ ಅದನ್ನು ಸಭೆಗೆ ತಂದು ಒಂದು ದಿವಸ ಇಟ್ಟು ....

ಶ್ರೀ ಎಂ. ವೀರಪ್ಪ ಮೊಯಿಲಿ : ಅಂತಹ ಪ್ರಸಂಗಗಳ ಅಂಕಿ ಸಂಖ್ಯೆಗಳು ನನ್ನ ಹತ್ತಿರ ರೆಡಿ ಇಲ್ಲ. ಆದರೆ ನನಗೆ ಗೊತ್ತಿದೆ, ನಾನೂ ಕೂಡ ಈ ಸದನದಲ್ಲಿ 72ನೇ ಇಸವಿಯಿಂದ ಇದ್ದೇನೆ. ಅಂತಹ ಪ್ರಸಂಗಗಳು ಕೂಡ ಅನೇಕ ಬಾರಿ ಆಗಿವೆ. ನಾವು ಇಲ್ಲಿ ಹೊಸದಾಖಲೆಯನ್ನು ಮಾಡಿದ್ದೇವೆಂದು ಏನೂ ಅಲ್ಲ......

ಶ್ರೀ ಬಿ.ಹೆಚ್. ಬನ್ನಿಕೋಡ್ : ಹೊಸದಾಗಿ ಏನೂ ತಪ್ಪು ಮಾಡಿಲ್ಲ. ಹಳೇ ತಪ್ಪನ್ನೇ ಮಾಡುತ್ತಿದ್ದೇವೆಂದು ಒಪ್ಪಿಕೊಳ್ಳಿ....

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಹೊಸ ಒಂದು ಸಂಪ್ರದಾಯವನ್ನು ಹಾಕುತ್ತಿದ್ದೇವೆಂದು ಒಟ್ಟು ಅಭಿಪ್ರಾಯ ತಮ್ಮ ವಾದದಿಂದ ಬರುತ್ತಿದೆ ಇದಕ್ಕೆ ಒಂದು ಪುಷ್ಠಿ. ಇಷ್ಟನ್ನು ಹೇಳುವುದಕ್ಕಾಗಿ ನಾನು ಈ ಒಂದು ದಾಖಲೆಯನ್ನು ಇಲ್ಲಿ ಒಪ್ಪಿಸಿದ್ದೇನೇ ಹೊರತು ಅನ್ಯಥಾ ತಮಗೆ ವಿರುದ್ಧವಾಗಿ ಮಾತನಾಡಬೇಕೆಂದಲ್ಲ. ಸ್ಪಿರಿಟ್ ಆಫ್ ಯುವರ್ ಆರ್ಗ್ಯುಮೆಂಟ್......

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ನಿಮಗೆ ಅನೇಕ ಹೊಸದಾಖಲೆಗಳನ್ನು ಹೇಳುತ್ತಿರುತ್ತೇವೆ. ಆದ್ದರಿಂದ ನಾವು ಬೇಸರ ಮಾಡಿಕೊಳ್ಳುವುದಿಲ್ಲ. ನಿಮ್ಮ ಅಂಕಿಅಂಶಗಳನ್ನು ಹೇಳಿ. ಆಡಳಿತ ಪಕ್ಷದ 80 ಜನ ಶಾಸಕರು ಇಲ್ಲಿ ಕೂತು ಧರಣಿ ಮಾಡಿರತಕ್ಕ ದಾಖಲೆ ಇಡೀ ಇಂಡಿಯಾದಲ್ಲಿ ಎಲ್ಲೂ ಕೂಡ ನಡೆದಿಲ್ಲ. ಅಂಥ ದಾಖಲೆ ನಿಮ್ಮ ಕಾಲದಲ್ಲಿ ಇಲ್ಲಿ ನಡೆದಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇಲ್ಲಿ ಆದುದ್ದು ಜಾಗತಿಕ ದಾಖಲೆ. ಇದು ಒಂದು ರೀತಿಯಲ್ಲಿ ವಿಶೇಷವಾದುದು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಮೊದಲನೇ ಆರ್ಡಿನೆನ್ಸ್‌ನ್ನು ಇಷ್ಯೂ ಮಾಡಿದ್ದೇವೆ. ಮೊದಲನೇ ಆರ್ಡಿನೆನ್ಸ್ ಸರ್ವೈವ್ ಆಗಿರುವಾಗಲೇ ನಾವು ಎರಡನೇ ಆರ್ಡಿನೆನಸ್ನು ಇಷ್ಯೂ ಮಾಡಬೇಕಾಗುತ್ತದೆ. ಮೊದಲನೆಯದು ಲ್ಯಾಪ್ಸ್ ಆದಮೇಲೆ ಸೆಕೆಂಡ್ ಆರ್ಡಿನೆನ್ಸನ್ನು ಇಷ್ಯೂ ಮಾಡುವುದಕ್ಕಾಗುವುದಿಲ್ಲ. ಮೊದಲನೇ ಆರ್ಡಿನೆನ್ಸ್ ರಿಪೀಲ್ ಸೆಕೆಂಡ್ ಆರ್ಡಿನೆನ್ಸ್‌ನಲ್ಲಿ ಇರಲೇಬೇಕಾಗುತ್ತದೆ. ಅದನ್ನೇ ನಾವು ಇಲ್ಲಿ ಮಾಡಿರತಕ್ಕದ್ದು. ಇದನ್ನು ನಾವು ರಿಪೀಲ್ ಮಾಡದಿದ್ದರೆ ಎರಡು ಆರ್ಡಿನೆನ್ಸ್‌ಗಳೂ at a time on the same subject cannot be in force. So, first Ordinance will have to be repealed by the second Ordinance. So, there is nothing extraordinary. That is Number One. Number two is, there is some typographical error.

ಇದರಲ್ಲಿ ಆರ್ಡಿನೆನ್ಸ್ 6 ಎಂದು ಬಂದಿದೆ. ಇದಕ್ಕೆ ಬದಲಾಗಿ ಆರ್ಡಿನ್ಸನ್ನು 10 ಎಂದು ಬರಬೇಕಾಗಿತ್ತು. ಈ ತಿದ್ದುಪಡಿಯನ್ನು ನಾವು ಈ ಮಸೂದೆ ಕನ್ಸಿಡರೇಷನ್‌ಗೆ ಬರುವುದಕ್ಕೆ ಮುಂಚಿತವಾಗಿಯೇ ನಾವು ಮೂವ್ ಮಾಡಿದ್ದೇವೆ. ಅದರ ಪ್ರತಿಯನ್ನು ಕೂಡ ನಾವು ಈ ಸದನಕ್ಕೆ ಹಂಚಿದ್ದೇವೆ. It is a typographical error. ಈ ಟೈಪೋಗ್ರಫಿಕಲ್ ಎರರ್ ಈ ಕಾನೂನಿಗೆ ಒಂದು ಭಾರೀ ಆಘಾತವನ್ನು ತಂದಿದೆ ಎಂದು ತಾವು ತಿಳಿದುಕೊಳ್ಳಬೇಕಾಗಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಏಕಾಂತಯ್ಯನವರು ಹೇಳುತ್ತಿದ್ದಾರೆ, ಇದು ತಪ್ಪಾಗಿದೆ, ಇದನ್ನು ಸರಿಪಡಿಸಿಕೊಳ್ಳಿ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಪ್ರತಿಷ್ಠೆ ಪ್ರಶ್ನೆ ಅಲ್ಲ. ತಾವು ಹೇಳುವುದಕ್ಕೆ ಮೊದಲೇ ಟೈಪೋಗ್ರಫಿಕಲ್ ಎರರ್ ಬಗ್ಗೆ ತಿದ್ದುಪಡಿ ಈಗಾಗಲೇ

ಇಲ್ಲಿ ಬಂದಿದೆ. ಇದರಲ್ಲಿ ದೊಡ್ಡ ಆಘಾತವೇನೂ ಆಗಿಲ್ಲ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಿದ್ದೇನೆ. Ordinance that's all. That has extinguished the rights of the Bottlers. One side of the argument was, once the right is extinguished, that cannot be repealed by the lapse of an Ordinance or the lapse of a Law. It is one time we struck the contract and it is terminated. Even now, I feel no such legislation is necessary. Thereafter, once the Ordinance has extinguished the contract, the contract has been extinguished. After that, it is left to the Government to take any executive action. To be very frank with you, no second Ordinance was also necessary, according to my personal legal opinion. But, still we brought it because, the case is there in Supreme Court. The Strike is very high. Some opinion of the Advocates is that since the contract has been terminated, it cannot be revived just because the Ordinance has been lapsed.

ಆದರೆ ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಇನ್ನೂ ಪೆಂಡಿಂಗ್ ಇದೆ. ತಮಗೂ ಗೊತ್ತಿದೆ. ಕಾನೂನಿನ ಒಂದು ಎಳೆ ಸಿಕ್ಕಿದರೆ ಸಾಕು ನಿಮಗೆ ವಿರುದ್ಧವಾಗಿ ಹೋಗಬಹುದು. ಆದರೆ ಅದನ್ನು ನಾವು ಮಾಡುವುದಿಲ್ಲ. ತಮಗೆ ಗೊತ್ತಿದೆ. We never wanted to take the risk. With the Bottling Contractors we fought tooth and nail. On all fronts they fought the war. Naturally they are fighting the war before the Supreme Court.

ನಾಳೆ ರಿಸ್ಕ್ ಆಗುತ್ತದೆ. ಏನಾದರೂ ಒಂದು ಸಣ್ಣ ಎಳೆ ಸಿಕ್ಕಿ ಅದನ್ನು ಸುಪ್ರೀಂ ಕೋರ್ಟ್‌ನವರು ಇಂಟರ್‌ಪ್ರಿಟ್ ಮಾಡಿದಾಗ ತೊಂದರೆಯಾಗಿ ಅದು ನಮ್ಮ ಕರ್ನಾಟಕ ರಾಜ್ಯದ ಜನತೆಗೆ ವಂಚನೆ ಮಾಡಿದಂತಾಗುತ್ತದೆ. ಆದರೆ ಆ ರೀತಿ ಮಾಡುವುದಕ್ಕೆ ನಮಗೆ ಇಷ್ಟವಿಲ್ಲ.

We never wanted to give that kind of a loophole. That is alos one of the reason why we did not move. Further, that was the consideration why we did not get on. Sometimes we said, it may not be necessary to pass the Bill. When we got another opinion, for abundant caution, then we thought why should we take risk. Let there be another ordinance.

I am telling you the practical problems. There is not even an iota of doubt. We wanted to leave for any legal interpretation of the provisions as far as this transaction is concerned. ಆದುದರಿಂದ ಏಕೆಂದರೆ ನಾಳೆ ಮಾಡದೇ ಇದ್ದರೆ ಜನ ಅಲ್ಲಿ, ಸುಪ್ರೀಂ ಕೋರ್ಟ್‌ನವರು suppose if they say that "revive everything" then, I would have landed into lot of difficulties, big tragedy, big disaster would have happened. ಅದನ್ನು ತಡೆಯಲಿಕ್ಕೆ ನಾವು ಮಾಡಿದ್ದೇವೆ. A matter like this, just imagine, we are concelling a very big contract of Rs. 50 crores. A very big deal, ಇಲ್ಲಿ ಲೆಜಿಸ್ಲೇಷನ್ ತಂದು, ಅದನ್ನು ಪಾಸ್ ಮಾಡಿ ಆಮೇಲೆ ರದ್ದು ಮಾಡುವುದು,

a matter like nationalisation, any question of a nationalisation of any trade or bank, even the Government of India, any State, they have always invaraiably resorted to this kind of an Ordinance so that immediate action

can be taken so that no room will be given to any party to do whatever, because the party can go even to the Court from legislating or taking any executive action so, ಇವೆಲ್ಲಾ strategy of legislation which is done with the bonafide intention, with the best interest of safeguarding the exchequer, safeguarding the interest of the people and the State. If there is malafide intention, you have every right to question This is the extreme step taken not to give any loophole for making any people to attack this kind of transaction to put a to it.

ಎಲ್ಲಾ ಪ್ರೊಸೀಡಿಂಗ್ಸ್ ತಂದಿದ್ದೇನೆ. ಮಾನ್ಯ ದೇಶಪಾಂಡೆಯವರು ಸ್ವಾಗತ ಮಾಡಿದ್ದಾರೆ. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿವರಗಳನ್ನು ತಾವು ಕೇಳಿದ್ದೀರಿ. ಕೆಲವು ವಿಚಾರ ಕೇಳಿದ್ದೀರಿ. ಏಕೆಂದರೆ ಕೆಲವು ಸಂಶಯಗಳು ಬರತಕ್ಕದ್ದು ಸಹಜ. ಈ ವ್ಯವಹಾರವೇ ಹೀಗೆ. ಎಲ್ಲರಿಗೂ ಸಂಶಯ ಬರತಕ್ಕ ವ್ಯವಹಾರವೇ ಆಗಿದೆ. ಸಮಸ್ಯೆ ನಿವಾರಣೆ ಮಾಡತಕ್ಕದ್ದು ನಮ್ಮ ಕರ್ತವ್ಯ. ಏಕೆಂದರೆ ಇದರ ಬಗ್ಗೆ ಯಾವುದೇ ಸಂಶಯಕ್ಕೆ ಆಸ್ಪದ ಇಲ್ಲದ ರೀತಿಯಲ್ಲಿ ಈ ಒಂದು ಕರ್ತವ್ಯವನ್ನು ಮಾಡುವುದಕ್ಕೆ ನಾವೆಲ್ಲಾ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ಮಾಡಿದ್ದೇವೆ. ತಮಗೆ ಗೊತ್ತಿದೆ. ಏಕೆ ನಾವು ಬಾಟ್ಲಿಂಗ್ ಕಾಂಟ್ರಾಕ್ಟ್ ಕ್ಯಾನ್ಸಲ್ ಮಾಡಿದ್ದೇವೆ ಎಂದು ಅದರ ಬಗ್ಗೆ ನಾನು ವಿಸ್ತಾರವಾಗಿ ಹೇಳುವುದಿಲ್ಲ. ಅದರ ಬಗ್ಗೆ ತಾವು ಪ್ರಶ್ನೆ ಕೂಡ ಎತ್ತಿಲ್ಲ. ಆದರೆ ಇವತ್ತು ತಾವು ಹೇಳಿದಂಥ ಕೆಲವು ಸೂಕ್ಷ್ಮವಾದ ಅಂಕಿಸಂಖ್ಯೆಗಳ ಬಗ್ಗೆ, ನಾನು ಉತ್ತರ ನೀಡುತ್ತೇನೆ. ಸ್ಯಾಚೆಟ್ಸ್ ಫಿಲ್ಲಿಂಗ ಕಾಸ್ಟ್ ಎಷ್ಟು ಆಗುತ್ತದೆ? ಅದು 2 ರೂಪಾಯಿ 32 ಪೈಸೆ. ಬಾಟ್ಲಿಂಗ್ ಕಾಸ್ಟ್ ಹಿಂದೆ 4 ರೂಪಾಯಿ ಇತ್ತು. ಜೂನ್ 92ರಲ್ಲಿ 8 ರೂಪಾಯಿಗೆ ಏರಿಸಲಾಗಿದೆ.

As against 2.32, bottling contract is Rs. 4. ಆಮೇಲೆ 8 ರೂ. ಆಯಿತು. ಇದನ್ನು ಗೌರ್ನಮೆಂಟ್ ಏಜೆನ್ಸೀಸ್‌ಗೆ ಕೊಟ್ಟಿದ್ದೇವೆ. ನಾವು ಪ್ರೈವೇಟ್ನವರಿಗೆ ಕೊಟ್ಟಿಲ್ಲ. We have taken over the entire transaction, by Mysore Sales International Ltd ಮತ್ತು ಮೈ ಶುಗರ್ ಫ್ಯಾಕ್ಟರಿಯವರು ಇದನ್ನು ಸಂಪೂರ್ಣವಾಗಿ ತೆಗೆದುಕೊಂಡಿದ್ದಾರೆ. ಯಾರಿಗೂ ಕೂಡ ಆ ಹಕ್ಕನ್ನು ಲೀಸ್ ಕೊಟ್ಟಿಲ್ಲ. ನಾವು ಪ್ರೆಮಿಸ್ಸನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ. we have taken over the Premises ಆದರೆ ಅವರ ಎಂಪ್ಲಾಯೀಸ್ ಇಲ್ಲ. ಅವರಿಗೆ ಯಾವ ರೀತಿಯ ಹಕ್ಕೂ ಇಲ್ಲ. ಅವರು ಅಲ್ಲಿ ಪ್ರವೇಶ ಮಾಡುವ ಹಾಗೆ ಇಲ್ಲ. It is totally, exclusively handled by the Excise Department.

ಸರಿಯಾದ ಒಂದು ವಿಜಿಲೆನ್ಸ್ ಹಾಕಿ ನಾವು ಅದನ್ನು ಮ್ಯಾನೇಜ್ ಮಾಡುತ್ತಿದ್ದೇವೆ. ಒಂದು ಪ್ರಶ್ನೆ ಕೇಳಿದ್ದೀರಿ. ಅದು ಸರಿ ನಾವು ಹೊಸದಾಗಿ ಕಟ್ಟಡ ಕಟ್ಟಿ ಅಲ್ಲಿ ಮಾಡಬೇಕೆಂದರೆ ಕೋಟ್ಯಾಂತರ ರೂಪಾಯಿ ಆಗುತ್ತದೆ. 3 ಕೋಟಿ ರೂಪಾಯಿಗಳನ್ನು ಎಕ್ವಿಪ್ಮೆಂಟ್ ಪರ್ಚೇಸ್ಗೆ ಬಿಡುಗಡೆ ಮಾಡಿದ್ದೇವೆ. ನಾವೇ ಸ್ವಂತ ಕಟ್ಟಡ ಮಾಡಿ ಈ ಸ್ಯಾಚೆಟ್ಸ್ ಮಾಡುವ ವ್ಯವಸ್ಥೆ ಮಾಡಿದರೆ it will cost the exchequer, when the premises are available on rent, we have taken it, of course, if you say that, ನಿಮ್ಮ ಪ್ರೆಮಿಸ್ಸನ್ನಲ್ಲಿ, ನಿಮ್ಮ ಕಟ್ಟಡದಲ್ಲಿ ಕೆಲಸ ಮಾಡಬೇಕೆಂದರೆ ಎಕ್ಸೈಕರ್‌ಗೆ ಹಣ ಜಾಸ್ತಿಯಾಗುತ್ತದೆ, ಬಾಡಿಗೆ ಕೊಟ್ಟರೆ ಅದರಿಂದ ಕಾಸ್ಟ್ ಕಡಿಮೆ ಆಗುತ್ತದೆ. ರಾಜ್ಯದ ಸಂಪನ್ಮೂಲದ ದೃಷ್ಟಿಯಿಂದ ಇದನ್ನು ಮಾಡಿದ್ದೇವೆಯೇ ಹೊರತು ಅನ್ಯಥಾ ಅಲ್ಲ. ಮತ್ತೆ ತಾವು ನೋಡಿರಬಹುದು. ನಾವು ಬಾಟ್ಲಿಂಗ್ ಕಾಂಟ್ರಾಕ್ಟಿಂದ there has been a declining trand with regard to the sales of arrack. 1990-91ರಲ್ಲಿ

ಸೇಲ್ಸ್ 718.87 ಲೀಟರ್ಸ್ ಇದ್ದರೆ 1991-92ರಲ್ಲಿ 684.50 ಲಕ್ಷ ಲೀಟರ್‌ಗೆ ಇಳಿಯಿತು. 1992-93ರಲ್ಲಿ 641-66 ಲಕ್ಷ ಲೀಟರ್ಗೆ ಇಳಿಯಿತು.

ಶ್ರೀ ಸಿ. ಬೈರೇಗೌಡ : ಅದಕ್ಕೆಲ್ಲಾ ಕಾರಣ ಗೊತ್ತೇ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಬಾಟ್ಲಿಂಗ್ ಕಾಂಟ್ರಾಕ್ಟ್ ಪ್ರಾರಂಭ ಆಗಿದ್ದು ನಿಮ್ಮ ಸರ್ಕಾರ ಇದ್ದಾಗ. ಎಲ್ಲಿ ಮೂಲಭೂತವಾಗಿ ಹಣ ಪೋಲು ಆಗುತ್ತಿದೆಯೋ, ಎಲ್ಲಿ ಇಂತಹ ಭ್ರಷ್ಟಾಚಾರಕ್ಕೆ ಮೂಲ ಇರುತ್ತದೋ ಆ ಮೂಲ ಕಿತ್ತು ಹಾಕಬೇಕೆಂದು ನಾವು ಮಾಡಿದ್ದೇವೆ. ಸ್ಪೆಷ್ ಮನಿ ಎಲ್ಲಿ ಬರುತ್ತದೆ. ಹಾಳು ಹಣ ಎಲ್ಲಿ ಉತ್ಪತ್ತಿ ಆಗುತ್ತದೋ, ಅದು ಉತ್ಪತ್ತಿಯಾಗಿ, ಅದು ಹರಿದು ಬಂದಾಗ ಆ ಪ್ರವಾಹವನ್ನು ತಡೆದು ನಿಲ್ಲಿಸುವುದಕ್ಕಾಗುವುದಿಲ್ಲ. ಈ ಮೂಲ ನಿಲ್ಲಿಸಿಬಿಟ್ಟರೆ ಬಹುಶಃ ಈ ಒಂದು ಕ್ಷೇತ್ರದಲ್ಲಿ ಆಗತಕ್ಕ ಹಣದ ಪೋಲು, ಈ ಕ್ಷೇತ್ರದಲ್ಲಿ ಹುಟ್ಟತಕ್ಕ ಭ್ರಷ್ಟಾಚಾರದ ಮೂಲ ಏನಿದೆ ಅದನ್ನು ಕಿತ್ತುಹಾಕಬಹುದು ಎನ್ನುವ ಸದುದ್ದೇಶದಿಂದ ಇದನ್ನು ಮಾಡಿದ್ದೇವೆ ಮತ್ತು ರಾಜ್ಯ ಸರ್ಕಾರದ ಸಂಪನ್ಮೂಲವನ್ನು ಹೆಚ್ಚು ಮಾಡಬಹುದು ಎನ್ನುವ ಉದ್ದೇಶದಿಂದ ಇದನ್ನು ಮಾಡಲಾಗಿದೆ. ತಮಗೇ ತಿಳಿದ ಹಾಗೆ ಜುಲೈನಿಂದ ಡೆಸೆಂಬರ್ 92, ನಮ್ಮ ಹೊಸ ಪಾಲಿಸಿ ಬಂತು. 92ರಲ್ಲಿ 287.53 ಲಕ್ಷ ಲೀಟರ್ಸ್ ಇದ್ದರೆ, ಅದು ಬಾಟ್ಲಿಂಗ್ ಕಾಂಟ್ರಾಕ್ಟ್ ಇದ್ದಾಗ, ಡಿಸೆಂಬರ್ 93ರಲ್ಲಿ 374.48 ಲಕ್ಷ ಲೀಟರ್ಸ್ ಸೇಲ್ಸ್ ಆಯಿತು. ಆಗ ಎಷ್ಟು ಜನರು ರೆಸಿಸ್ಟ್ ಮಾಡಿದರು ಎಂಬುದು ನಿಮಗೇ ಗೊತ್ತಿದೆ. ಹೊಸ ಸಿಸ್ಟಮ್ ಅನ್ನು ಇಂಟ್ರೊಡ್ಯೂಸ್ ಮಾಡುವುದು ಅಷ್ಟು ಸುಲಭ ಅಲ್ಲ. ಒಂದು ಕಡೆ ಕೋರ್ಟ್ ಎದುರಿಸಬೇಕಾಗಿ ಬಂತು ಮತ್ತೊಂದು ಕಡೆ ಡೀಕಂಟ್ರೋಲ್ ಆಫ್ ಮೊಲಾಸಸ್ ಬಂತು. ಸಪ್ಲೈಯನ್ನು ನಾವು ನಿಲ್ಲಿಸುತ್ತೇವೆಂದು ಹೇಳಿದರು. ನಮಗೆ ಯಾರೂ ಸಹಕಾರ ಕೊಡಲಿಲ್ಲ. ನೀವು ಒಬ್ಬರು ಮಾಡಿದಿರಿ. But many of co-operative societies did not co-operate with us, they also went to the Court. Of course ನೀವು ಸಪ್ಲೈ ಮಾಡದಿದ್ದರೆ ಲೀಟರ್ಸ್ ಕೂಡ ಆರ್.ಎಸ್. ಹೊರಗೆ ಬಿಡುವುದಿಲ್ಲ ಎಂದು ನಾನು ತಡೆದು ನಿಲ್ಲಿಸಿದೆ. Arm twisting methods the Govt. should always use. We never obliged. We said, ನೀವು ನಮಗೆ ಸಪ್ಲೈ ಮಾಡದೇ ಇದ್ದರೆ ಹೊರಗೆ ಮಾರಲು ಒಂದು ಲೀಟರ್ ಬಿಡುವುದಿಲ್ಲವೆಂದು ಹೇಳಲೇಬೇಕಾಯಿತು. ನಿರ್ದಾಕ್ಷಿಣ್ಯದಿಂದ ನಾನು ಆ ಕಾರ್ಯಕ್ರಮವನ್ನೂ ಕೂಡ ಮಾಡಬೇಕಾಗಿ ಬಂತು. But de-control of molasses, it was a big blow, of course, I cannot say, ರೈತನ ಮಟ್ಟಿಗೆ it was a blessing. ನಾವು ಅದಕ್ಕೆ ಓಪನ್ ಆಗಿ ಕೇಂದ್ರ ಸರ್ಕಾರದ ನೀತಿ ಬಗ್ಗೆ ನಾವು ಪ್ರತಿಭಟನೆ ಮಾಡಬೇಕಾಗಿ ಬಂತು. ರಾಜ್ಯ ಸರ್ಕಾರದ ಬೊಕ್ಕಸದ ಮಟ್ಟಿಗೆ ನಮಗೆ ತೊಂದರೆ ಆಯಿತು. It was a big shock, big on slaught on us.

ರೈತರ ಮಟ್ಟಿಗೆ ಅದು ವಿಶೇಷವಾಗಿ ಒಂದು ರಾಜ್ಯದ ಬಾಗಿಲನ್ನು ತೆರೆದಿದೆ. ಆ ರೈತರಿಗೆ ಒಳ್ಳೆಯದಾಯಿತು. ಆದರೆ ರಾಜ್ಯದ ಬೊಕ್ಕಸಕ್ಕೆ ಸಡನ್ನಾಗಿ ಇಂತಹ ಆಘಾತ ಬಂದರೆ ಯಾವ ರಾಜ್ಯ ಕೂಡಾ ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಬಹುಶಃ ನಾವು ಸೂಕ್ಷ್ಮವಾಗಿ ಚಾಣಕ್ಯತನದಿಂದ ಅಥವಾ ಧೈರ್ಯದಿಂದ ಇಂತಹ ಒಂದು ಆನ್ಸ್ಲಾಟ್ ಎದುರಿಸಲು ಆಗದೇ ಇದ್ದಿದ್ದರೆ today perhaps ನೀವು ಏನು ಆಪಾದನೆ ಮಾಡುತ್ತಿದ್ದೀರೋ ಆ depletion in the revenue ಆಗುತ್ತಾ ಇತ್ತು. but we faced very boldly, all the obstacles, All obstacles came on the excise revenue.

ಇದು ನಿಜವಾಗಿಯೂ ಬಹುಶಃ ಯಾವ ಸರ್ಕಾರಕ್ಕೂ ಯಾವ ಕಾಲದಲ್ಲಿ ಕೂಡಾ ಎಕ್ಸೈಸ್ ಒಂದು ರೆವಿನ್ಯೂ ಕಲೆಕ್ಷನ್ ಬಗ್ಗೆ ಇಂತಹ ಆನ್ಸ್ಲಾಟ್ ಬಂದಿರಲಿಲ್ಲ. It is an unprecedented, of Course, I did not shirk that kind of a difficulty,

I suffered myself we tried to manage it and come out from the crisis After all ನಮ್ಮ ಬುದ್ದಿವಂತಿಗೆ ಇರುವುದು when we come out from the crisis I must say I could come out from the crisis with the blessings of all of you. I am not telling about the political aspect. about the administrative aspect the financial aspect of it.

ಏಕೆಂದರೆ ಈಗ ಕೇಂದ್ರದಲ್ಲಿ ನಾವು ಹೆಚ್ಚು ಮಾತನಾಡಿದ್ದಕ್ಕೆ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡಿಬಿಟ್ಟಿದ್ದಾರೆ. ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಆತಂಕ ಬಾರದ ಹಾಗೆ ಯಾವ ರೀತಿ ಕಾರ್ಯಕ್ರಮಗಳನ್ನು, ತಂತ್ರವನ್ನು ಅನುಸರಿಸಬಹುದು ಒಂದು ಸಮಿತಿಯನ್ನು ಕೇಂದ್ರ ಸರ್ಕಾರ ನೇಮಕ ಮಾಡಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಆ ಸಭೆಯನ್ನು 15ನೇ ತಾರೀಖಿಗೆ ದೆಹಲಿಯಲ್ಲಿ ಕರೆದಿದ್ದೇನೆ. ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳು ಫೋನ್ ಮಾಡುತ್ತಿದ್ದಾರೆ. ನೀವು ತಕ್ಷಣ ಇದಕ್ಕೆ ಪರಿಹಾರ ಮಾಡಿ, ನಮ್ಮ ಎಕ್ಸೈಸ್ ರೆವಿನ್ಯೂ ಎಲ್ಲ ಕುಸಿದುಬಿಟ್ಟಿದೆ. Excise revenue should be increased. ಎಂದು ಹೇಳುತ್ತಿದ್ದಾರೆ.

ಶ್ರೀ ಬಾಬಾಗೌಡ ಪಾಟೀಲ್ : ರೈತರಿಗೆ ನಷ್ಟ ಆಗದ ರೀತಿಯಲ್ಲಿ ನೋಡಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ರೈತರಿಗೆ ನಷ್ಟ ಆಗದ ಹಾಗೆ ನಾನು ನೋಡಿಕೊಳ್ಳುತ್ತೇನೆ. That goes without saying

ಶ್ರೀ ಬಿ.ಹೆಚ್. ಬನ್ನಿಕೋಡ್ : ಶ್ರೀ ಬಾಬಾಗೌಡರ ವಿಷಯದಲ್ಲಿ ಹೇಳಿದಿರಿ. ಎಲ್ಲಾ ಕಡೆಗಳಲ್ಲೂ ಡಿಸ್ಟಿಲರಿಗಳು ಇಲ್ಲ. ನಮ್ಮ ರಾಜ್ಯದಲ್ಲಿರುವ ಎಲ್ಲಾ ಶುಗರ್ ಫ್ಯಾಕ್ಟರಿಗಳಿಗೆ ಡಿಸ್ಟಿಲರಿ ಹಾಕಲಿಕ್ಕೆ ತಾವು ಏನಾದರೂ ವಿಚಾರ ಮಾಡಿದ್ದೀರಾ?

ಶ್ರೀ ಎಂ. ವೀರಪ್ಪಮೊಯ್ಲಿ : ಆದ್ದರಿಂದ ನಮ್ಮ ಹೊಸ ನೀತಿಯಲ್ಲಿ ಎಷ್ಟೇ ಗಂಡಾಂತರ, ತೊಂದರೆ ಸಂಕಷ್ಟ ಬಂದರೂ ಕೂಡ We could sustain it with an difficulties. ಯಾವುದೇ ಆತಂಕ ಬಾರದೇ ಇದ್ದಿದ್ದರೆ ತಾವು ಹೇಳಿದಂಥ ದಿಕ್ಕಿಗೆ ನಾವು ಹೋಗುತ್ತಿದ್ದೆವು. The excise revenue would have definitely jumped. I know it. It would have given 100% ಈಗಲೂ ಸಾಧ್ಯವಿದೆ I agree with you. That is because of this difficulty . I had to face it. initial difficulty. ಅದನ್ನು ಕ್ರಾಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಪರಿಸ್ಥಿತಿಯಲ್ಲಿ every minute, every hour, every night, I used to spend with the Finance Commissioner and Excise Commissioner. We thought we will collapse. It is only after getting over the crisis, I can come and tell you, the story; I can write a volume on this how I faced the situation and I am now sharing my difficulties. Even with my colleagues I have not shared my difficulties. The people will say that I could not manage it but I said I must prove that I could manage it. Now I can say that we could manage it.

ಆದ್ದರಿಂದ ಇವತ್ತು ಇದರಲ್ಲಿ reduction of supply price of arrack resulted in loss of revenue ಇದನ್ನು ತಾವು ಹೇಳಿದ್ದೀರಿ. ಇಲ್ಲ, ಇನ್ಕಮ್ ಇವತ್ತು ಕಡಿಮೆಯಾಗಿದೆ, ಸೇಲ್ಸ್ ಟ್ಯಾಕ್ಸ್‌ನಲ್ಲಿ ಕಡಿಮೆಯಾಗಿದೆ ಎಂದು ತಾವು ಕೊಟ್ಟ ಲೆಕ್ಕಾಚಾರ ಸರಿ. ಆದರೆ ಇದು ಒನ್ಸೈಡ್ಡ್ ಆಯಿತು. ಮತ್ತೊಂದು ಲೆಕ್ಕಾಚಾರ ತಾವು ಕೊಡಲಿಲ್ಲ. ಅದನ್ನು ಬೇಕಾದರೆ ನಿಮಗೆ ಕೊಡುತ್ತೇನೆ. ಅದರ ಮೇಲೆ ಚರ್ಚೆ ಮಾಡಿ. ಈಗ average supply price of arrack to contractors 30ನೇ ತಾರೀಖು ಜೂನ್ 1993ರ ಹಿಂದೆ Rs. 23 per litre when arrack was supposed to be supplied in sachets.

ಮೊದಲು ಬಾಟಲ್ನಲ್ಲಿ ಸಪ್ಲೈ ಆಗುತ್ತಿರಲಿಲ್ಲ. ಅದು ನಿಮಗೆ ಗೊತ್ತಿದೆ. ಫಸ್ಟ್ ಜುಲೈ 1993ರಿಂದ ಸಪ್ಲೈ ಪ್ರೈಸ್ 16 ರೂಪಾಯಿಗೆ ರೆಡ್ಯೂಸ್ ಆಯಿತು. Supply price is reduced to Rs. 16/- ಆಮೇಲೆ supply of arrack through satchets. Rs. 13.86 for arrack supplied in bulk; ಏಕೆಂದರೆ ಮೊದಲು ಅರೆಂಜ್ಮೆಂಟ್ಸ್ ಆಗಿರಲಿಲ್ಲ. We supplied the arrack in bulk 6.5.94ರಿಂದ 18 ರೂಪಾಯಿ 40 ಪೈಸ್ ಆಯಿತು. ಏಕೆಂದರೆ ನಾವೇ ಡ್ಯೂಟಿ ಎಲ್ಲಾ ಜಾಸ್ತಿ ಮಾಡಿದೆವು. ಸರ್ಕಾರಕ್ಕೆ ನಷ್ಟವಾಗಬಾರದು ಎಂದು ಹೇಳಿ ಅವರ ಮೇಲೆ ಹಾಕಿದ್ದೇವೆ. ಇದರ ಕಾಸ್ಟ್ ಏನು ಆಗುತ್ತಿದೆ ಎಂದರೆ, ತಾವು ಹೇಳಿದ ಪ್ರಕಾರ, ಮೊದಲನೇ ನೀತಿ ಪ್ರಕಾರ ರೆವಿನ್ಯೂ ಇಂಪ್ಲಿಕೇಷನ್ 3-91 ರೂ. ಆದರೆ 93-94 ಪ್ರಕಾರ 2.79 ಅಂದರೆ ಡಿಫರೆನ್ಸ್ 1.12 ಪರ್ ಲೀಟರ್ ಆಫ್ ಅರ್ರ್ಯಾಕ್. ನೀವು ಹೇಳಿದಂಥ ಲೆಕ್ಕದಲ್ಲಿ reduction of Rs. 1.12 per bulk litre of arrack in sales tax revenue. The total loss is 7.27 crores.

ನಿಮ್ಮ ಲೆಕ್ಕದ ಪ್ರಕಾರ 642 ಲಕ್ಷ ಲೀಟರ್ ಕನ್ಸಂಷನ್ ಆದರೆ ಈಗ ಇದನ್ನು ಈ ಕ್ರಮಕ್ಕೆ ಅನ್ವಯಿಸಿರುವುದರಿಂದ 30% ಪರ್ಸೆಂಟ್ over the last year in the current year.

ಆದರೆ ಇದರ ಲೆಕ್ಕಾಚಾರ ಹಾಕಿದರೆ ಸುಮಾರು 7.34 ಕೋಟಿ ಕವರ್ ಮಾಡಿ 12 ಕೋಟಿ ರೂಪಾಯಿ ಹೆಚ್ಚು ನಮಗೆ ಲಾಭ ಬರುತ್ತದೆ. ಒಂಡು ಅಕೌಂಟ್ನಲ್ಲಿ ಅಂದರೆ, 12 ಕೋಟಿ ಮತ್ತು 7.27 ಕೋಟಿ ಅದರಲ್ಲಿ, 7.27 ಕೋಟಿಯನ್ನು ತೆಗೆದರೆ 12 ಕೋಟಿ ಪರ್ ಅನಮ್ ನೆಟ್ ಲಾಭ ನಮಗೆ ಬರುತ್ತದೆ. ಆದ್ದರಿಂದ ಲಾಭವಾಗುತ್ತಿದೆಯೇ ಹೊರತು ಅದರಿಂದ ನಷ್ಟವಾಗುವುದಿಲ್ಲ. ಆ ಲೆಕ್ಕ ಕಳುಹಿಸುತ್ತೇನೆ. ಅಲ್ಲವೆಂದು ಹೇಳಿದರೆ ಅಲ್ಲವೆಂದು ಹೇಳಿ. ನಾವು ಸರಿಯಾಗಿ ವಿಮರ್ಶೆ ಮಾಡಿ ಲೆಕ್ಕಾಚಾರ ಹಾಕಿದ್ದೇವೆ. ಆದ್ದರಿಂದ ಒಂದು, ಕನ್ಸ್ಯೂಮರ್ಸ್ಗೆ ಕಡಿಮೆ ದರದಲ್ಲಿ ಕೊಡಬೇಕು. ತಮಗೆ ಗೊತ್ತಿದೆ, ಹಿಂದೆ 180 ಮಿಲಿ ಲೀಟರ್ನ್ನು ಬಾಟಲಿಂಗ್ನಲ್ಲಿ ಕೊಡಬೇಕಿತ್ತು. ಇದು 180 ಎಂ.ಎಲ್ ಸಾಮಾನ್ಯ ಮನುಷ್ಯರಿಗೆ ಅಗತ್ಯ ಇಲ್ಲ. ಅದನ್ನು ಫೋರ್ಸಿಬಲಿ ಪರ್ಚೇಸ್ ಮಾಡಬೇಕಾಗಿತ್ತು. ಈಗ ನಾವು ಕಡಿಮೆ ಪ್ರಮಾಣದಲ್ಲಿ ಕೊಡುತ್ತೇವೆ. 100 ಎಂ.ಎಲ್.ನಲ್ಲಿ ಕೊಡತಕ್ಕಂಥ ಪರಿಸ್ಥಿತಿ ಈಗ ಉದ್ಭವವಾಗಿದೆ. ಜನಸಾಮಾನ್ಯರು ಇದನ್ನು ತೆಗೆದುಕೊಳ್ಳುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುತ್ತದೆ. ಇದರಿಂದ ಗ್ರಾಹಕರಿಗೆ ಬಹಳ ಲಾಭವಾಗುತ್ತದೆಯೇ ಹೊರತು ಅದರಿಂದ ನಷ್ಟವಾಗುವುದಿಲ್ಲ ಎಂದು ಪ್ರತ್ಯೇಕವಾಗಿ ನಾನು ಹೇಳಬೇಕಾಗುತ್ತದೆ. ಇನ್ನೊಂದು ಪ್ರಶ್ನೆಯನ್ನು ಎತ್ತಿದಿರಿ. ಈಗ ಕಂಟ್ರಾಕ್ಟರ್ಸ್ಗೆ ಈ ಒಂದು ಕಾರಣದಿಂದ ಏನಾದರೂ ಅನ್‌ಡ್ಯೂ ಪ್ರಾಫಿಟ್ ಮಾಡುವುದಕ್ಕೆ ಅವಕಾಶ ಸಿಕ್ಕಿದೆಯೇ? ಎಲ್ಲರ ಮನಸ್ಸಿಗೆ ಬಂದ ಶಂಕೆಯನ್ನು, ಪ್ರಶ್ನೆಯನ್ನು ಸಹಜವಾಗಿ ಇಟ್ಟಿದ್ದೀರಿ. ಬೇರೇನೋ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ ಎಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಈಗ ತಮಗೆ ಗೊತ್ತಿರುವ ಹಾಗೆ price of arrack has been reduced by the Government from Rs. 75/- per litre in 1992-93 to Rs. 70/Ë per litre for the current year ಇದು ಸರಿ ಅಲ್ಲ. ನೋಟಿಫಿಕೇಷನ್ ಪ್ರಕಾರ ಅದನ್ನು ಫಿಕ್ಸ್ ಮಾಡಿದ್ದೇವೆ. ತಾವು ಅದರ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿದ್ದೀರಿ. ಮೊದಲೇ ನಾವು ಏಕೆ ಮಾಡಿದ್ದೇವೆ ಎಂದರೆ, ಅದಕ್ಕಿಂತ ಮೇಲೆ ಕೊಂಡುಹೋಗುತ್ತಾರೆ. ಆದರೆ ಪ್ರಾಮಾಣಿಕವಾಗಿ ಇದರಿಂದ ಹೆಚ್ಚು ಲಾಭ ಇಲ್ಲ.

ಶ್ರೀ ಸಿ. ಬೈರೇಗೌಡ : ನಾನು ಆಗಲೇ ಹೇಳಬೇಕಾಗಿತ್ತು, ಹೇಳಲಿಲ್ಲ. ಇದು ಎಲ್ಲದಕ್ಕೂ ಮೂಲ ಬೆಂಗಳೂರಿನಿಂದಲೇ. ಬೆಂಗಳೂರಿನಲ್ಲಿ ಕಂಟ್ರಾಕ್ಟರ್ ಇನ್ಕಮ್ ಟ್ಯಾಕ್ಸ್ನಲ್ಲಿ ಸಿಕ್ಕಿಹಾಕಿಕೊಂಡಿದ್ದರು. He could not explain his money. ಎಲ್ಲಿಂದ ಹಣ

ಮೊದಲು ಬಾಟಲ್ನಲ್ಲಿ ಸಪ್ಲೈ ಆಗುತ್ತಿರಲಿಲ್ಲ. ಅದು ನಿಮಗೆ ಗೊತ್ತಿದೆ. ಫಸ್ಟ್ ಜುಲೈ 1993ರಿಂದ ಸಪ್ಲೈ ಪ್ರೈಸ್ 16 ರೂಪಾಯಿಗೆ ರೆಡ್ಯೂಸ್ ಆಯಿತು. Supply price is reduced to Rs. 16/- ಆಮೇಲೆ supply of arrack through satchets. Rs. 13.86 for arrack supplied in bulk; ಏಕೆಂದರೆ ಮೊದಲು ಅರೇಂಜ್ಮೆಂಟ್ಸ್ ಆಗಿರಲಿಲ್ಲ. We supplied the arrack in bulk 6.5.94ರಿಂದ 18 ರೂಪಾಯಿ 40 ಪೈಸ್ ಆಯಿತು. ಏಕೆಂದರೆ ನಾವೇ ಡ್ಯೂಟಿ ಎಲ್ಲಾ ಜಾಸ್ತಿ ಮಾಡಿದೆವು. ಸರ್ಕಾರಕ್ಕೆ ನಷ್ಟವಾಗಬಾರದು ಎಂದು ಹೇಳಿ ಅವರ ಮೇಲೆ ಹಾಕಿದ್ದೇವೆ. ಇದರ ಕಾಸ್ಟ್ ಏನು ಆಗುತ್ತಿದೆ ಎಂದರೆ, ತಾವು ಹೇಳಿದ ಪ್ರಕಾರ, ಮೊದಲನೇ ನೀತಿ ಪ್ರಕಾರ ರೆವಿನ್ಯೂ ಇಂಪ್ಲಿಕೇಷನ್ 3-91 ರೂ. ಆದರೆ 93-94 ಪ್ರಕಾರ 2.79 ಅಂದರೆ ಡಿಫರೆನ್ಸ್ 1.12 ಪರ್ ಲೀಟರ್ ಆಫ್ ಅರ್ರ್ಯಾಕ್. ನೀವು ಹೇಳಿದಂಥ ಲೆಕ್ಕದಲ್ಲಿ reduction of Rs. 1.12 per bulk litre of arrack in sales tax revenue. The total loss is 7.27 crores.

ನಿಮ್ಮ ಲೆಕ್ಕದ ಪ್ರಕಾರ 642 ಲಕ್ಷ ಲೀಟರ್ ಕನ್ಸಂಷನ್ ಆದರೆ ಈಗ ಇದನ್ನು ಈ ಕ್ರಮಕ್ಕೆ ಅನ್ವಯಿಸಿರುವುದರಿಂದ 30% ಪರ್ಸೆಂಟ್ over the last year in the current year.

ಆದರೆ ಇದರ ಲೆಕ್ಕಾಚಾರ ಹಾಕಿದರೆ ಸುಮಾರು 7.34 ಕೋಟಿ ಕವರ್ ಮಾಡಿ 12 ಕೋಟಿ ರೂಪಾಯಿ ಹೆಚ್ಚು ನಮಗೆ ಲಾಭ ಬರುತ್ತದೆ. ಒಂದು ಅಕೌಂಟ್ನಲ್ಲಿ ಅಂದರೆ, 12 ಕೋಟಿ ಮತ್ತು 7.27 ಕೋಟಿ ಅದರಲ್ಲಿ, 7.27 ಕೋಟಿಯನ್ನು ತೆಗೆದರೆ 12 ಕೋಟಿ ಪರ್ ಅನಮ್ ನೆಟ್ ಲಾಭ ನಮಗೆ ಬರುತ್ತದೆ. ಆದ್ದರಿಂದ ಲಾಭವಾಗುತ್ತಿದೆಯೇ ಹೊರತು ಅದರಿಂದ ನಷ್ಟವಾಗುವುದಿಲ್ಲ. ಆ ಲೆಕ್ಕ ಕಳುಹಿಸುತ್ತೇನೆ. ಅಲ್ಲವೆಂದು ಹೇಳಿದರೆ ಅಲ್ಲವೆಂದು ಹೇಳಿ. ನಾವು ಸರಿಯಾಗಿ ವಿಮರ್ಶೆ ಮಾಡಿ ಲೆಕ್ಕಾಚಾರ ಹಾಕಿದ್ದೇವೆ. ಆದ್ದರಿಂದ ಒಂದು, ಕನ್ಸ್ಯೂಮರ್ಗೆ ಕಡಿಮೆ ದರದಲ್ಲಿ ಕೊಡಬೇಕು. ತಮಗೆ ಗೊತ್ತಿದೆ, ಹಿಂದೆ 180 ಮಿಲಿ ಲೀಟರ್ನ್ನು ಬಾಟಲಿಂಗ್ನಲ್ಲಿ ಕೊಡಬೇಕಿತ್ತು. ಇದು 180 ಎಂ.ಎಲ್ ಸಾಮಾನ್ಯ ಮನುಷ್ಯರಿಗೆ ಅಗತ್ಯ ಇಲ್ಲ. ಅದನ್ನು ಫೋರ್ಸಿಬಲಿ ಪರ್ಚೇಸ್ ಮಾಡಬೇಕಾಗಿತ್ತು. ಈಗ ನಾವು ಕಡಿಮೆ ಪ್ರಮಾಣದಲ್ಲಿ ಕೊಡುತ್ತೇವೆ. 100 ಎಂ.ಎಲ್.ನಲ್ಲಿ ಕೊಡತಕ್ಕಂಥ ಪರಿಸ್ಥಿತಿ ಈಗ ಉದ್ಭವವಾಗಿದೆ. ಜನಸಾಮಾನ್ಯರು ಇದನ್ನು ತೆಗೆದುಕೊಳ್ಳುವುದಕ್ಕೆ ಖಂಡಿತವಾಗಿಯೂ ಸಾಧ್ಯವಾಗುತ್ತದೆ. ಇದರಿಂದ ಗ್ರಾಹಕರಿಗೆ ಬಹಳ ಲಾಭವಾಗುತ್ತದೆಯೇ ಹೊರತು ಅದರಿಂದ ನಷ್ಟವಾಗುವುದಿಲ್ಲ ಎಂದು ಪ್ರತ್ಯೇಕವಾಗಿ ನಾನು ಹೇಳಬೇಕಾಗುತ್ತದೆ. ಇನ್ನೊಂದು ಪ್ರಶ್ನೆಯನ್ನು ಎತ್ತಿದಿರಿ. ಈಗ ಕಂಟ್ರಾಕ್ಟರ್ಗೆ ಈ ಒಂದು ಕಾರಣದಿಂದ ಏನಾದರೂ ಅನ್‌ಡ್ಯೂ ಪ್ರಾಫಿಟ್ ಮಾಡುವುದಕ್ಕೆ ಅವಕಾಶ ಸಿಕ್ಕಿದೆಯೇ? ಎಲ್ಲರ ಮನಸ್ಸಿಗೆ ಬಂದ ಶಂಕೆಯನ್ನು, ಪ್ರಶ್ನೆಯನ್ನು ಸಹಜವಾಗಿ ಇಟ್ಟಿದ್ದೀರಿ. ಬೇರೇನೋ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ ಎಂದು ಹೇಳುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಈಗ ತಮಗೆ ಗೊತ್ತಿರುವ ಹಾಗೆ price of arrack has been reduced by the Government from Rs. 75/- per litre in 1992-93 to Rs. 70/Ë per litre for the current year ಇದು ಸರಿ ಅಲ್ಲ. ನೋಟಿಫಿಕೇಷನ್ ಪ್ರಕಾರ ಅದನ್ನು ಫಿಕ್ಸ್ ಮಾಡಿದ್ದೇವೆ. ತಾವು ಅದರ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿದ್ದೀರಿ. ಮೊದಲೇ ನಾವು ಏಕೆ ಮಾಡಿದ್ದೇವೆ ಎಂದರೆ, ಅದಕ್ಕಿಂತ ಮೇಲೆ ಕೊಂಡುಹೋಗುತ್ತಾರೆ. ಆದರೆ ಪ್ರಾಮಾಣಿಕವಾಗಿ ಇದರಿಂದ ಹೆಚ್ಚು ಲಾಭ ಇಲ್ಲ.

ಶ್ರೀ ಸಿ. ಬೈರೇಗೌಡ : ನಾನು ಆಗಲೇ ಹೇಳಬೇಕಾಗಿತ್ತು, ಹೇಳಲಿಲ್ಲ. ಇದು ಎಲ್ಲದಕ್ಕೂ ಮೂಲ ಬೆಂಗಳೂರಿನಿಂದಲೇ. ಬೆಂಗಳೂರಿನಲ್ಲಿ ಕಂಟ್ರಾಕ್ಟರ್ ಇನ್ಕಮ್ ಟ್ಯಾಕ್ಸ್ನಲ್ಲಿ ಸಿಕ್ಕಿಹಾಕಿಕೊಂಡಿದ್ದರು. He could not explain his money. ಎಲ್ಲಿಂದ ಹಣ

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಖ್ಯಮಂತ್ರಿಗಳು ಈಗ ಗಂಡಾಂತರದಿಂದ ಪಾರಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀವು ಸುಖವಾಗಿರಬೇಕೆಂದು ಆರ್ಶೀರ್ವಾದ ಇದೆ, ಇದು ಎಂದೆಂದೂ ಇರಲಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ಗೊತ್ತಿದೆ ಎಷ್ಟು ರೆಸಿಸ್ಟೆನ್ಸ್ ಇದೆ ಎಂದು. ಕೆಲವು ಕಡೆ ಬೀದರ್ ಮತ್ತು ಗುಲ್ಬರ್ಗಾಕ್ಕೆ ಬರುವಾಗ, ಈ ವರ್ಷ ಆಕ್ಷನ್ಗೆ ಬಾಯ್ಕಾಟ್ ಮಾಡುತ್ತಾರೆ ಎಂಬ ಅಭಿಪ್ರಾಯ ಬಂತು. ಆ ಪರಿಸ್ಥಿತಿಯಲ್ಲಿ, there was a gang up but we did not. ಆದರೆ, ನಮಗೆ ಫೋನಿನ ಮೇಲೆ ಫೋನ್ ಬಂತು. ನೀವು ಇಂತಹ ರೂಲ್ಸ್ ಬದಲಾವಣೆ ಮಾಡಿ ಎಂದು, ರೂಲ್ಸ್ ಬದಲಾವಣೆ ಮಾಡದೇ ಇದ್ದರೆ, ಈ ಸಾರಿ "You are going to collapse". Yes, that was the threat but I said, "No, I will stand by Excise policy." I stood by excise policy but with all that my rental 394.68 crores in 92-93 has come to 440.52 crores. It is a good increase. ಅದೂ ಕೂಡ ಬದಲಾವಣೆಯಾಗತಕ್ಕ ಪರಿಸ್ಥಿತಿಯಲ್ಲಿದೆ. ಇದು ಬಂತು. 30% increase in the recorded sale ಆಮೇಲೆ ಟೋಟಲ್ ಕಾಸ್ಟ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. Added to this the price of arrack at Rs. 16/-, the total cost price worked out to Rs. 66 per litre.

ಆದ್ದರಿಂದ ಇವತ್ತು, 66 ಆಗುವಾಗ, ನೀವು 75 ಮಾಡಿದರೆ, ನಿಜವಾಗಿಯೂ ಹೇಳುವುದಿದ್ದರೆ, ನಾವು ಪ್ರೈಸ್ ಫಿಕ್ಸ್ ಮಾಡದೇ ಇದ್ದರೆ, ಗ್ರಾಹಕರಿಗೆ, we would have saved about Rs. 10/- ನಾನು ಹೇಳುತ್ತೇನೆ. because we have raised Rs. 10/-

10 ರೂಪಾಯಿ ಜಾಸ್ತಿಯಾಯಿತು. I am telling you. ಅದನ್ನು ಕಡಿಮೆ ಮಾಡಬಹುದಿತ್ತು. ಅದು ಆರ್ಗ್ಯುಮೆಂಟ್ ಮಾಡುವಂಥ ಪ್ರಶ್ನೆ ಇಲ್ಲ. ಏಕೆಂದರೆ ಕೆಲವುಸಾರಿ ನಾವು ಸಾರ್ವಜನಿಕ ಜೀವನದಲ್ಲಿರುವಾಗ, we will have to be very sensitive for the public perception of things. ಬರೀ ನಾವು ಸತ್ಯದಿಂದ, ಧರ್ಮದಿಂದ, ನೀತಿಯಿಂದ ನಡೆದರೆ ಸಾಲದು. ಜನಗಳಿಗೂ ಕೂಡ ನಾವು ಸತ್ಯದಿಂದ, ನೀತಿಯಿಂದ, ಧರ್ಮದಿಂದ ನಡೆದಿದ್ದಾರೆ ಎಂಬುದು ಕಾಣಬೇಕು. That is public perception. ಕೆಲವು ಸಾರಿ ಏನೂ ಮಾಡಿರುವುದಿಲ್ಲ. ಕೆಲವು ಮುಖ್ಯ ಮಂತ್ರಿಗಳು ಅಥವಾ ಕೆಲವು ಮಂತ್ರಿಗಳು ಏನೂ ತಪ್ಪು ಮಾಡಿರುವುದಿಲ್ಲ. ಆದರೆ, ಸಾರ್ವಜನಿಕ ಜೀವನದಲ್ಲಿ ಬಹಳ ಅನ್ಯಾಯ ಮಾಡಿದರು ಎಂದು ಬರುತ್ತದೆ. ಜನ ನಂಬುತ್ತಾರೆ.

ಇದನ್ನು ನಾನು ಸೀರಿಯಸ್ಸಾಗಿ ಹೇಳುತ್ತಿದ್ದೇನೆ. There are number of honest Chief Ministers and honest Ministers whose name has been tarnished because they have not taken seriously about the public perception of their action, public perception of their discharge of duties.

ಇದು ನಮ್ಮ ನಿಮ್ಮ ಕಥೆ. ರಾಜಕಾರಣಿಗಳ ಕಥೆ. ಸಾರ್ವಜನಿಕ ಜೀವನದಲ್ಲಿ, ಅವರು ಎಷ್ಟು ಹಣ ಮಾಡಿದ್ದಾರೆ ಎಂಬುದು, ಅವರು ಸತ್ತಾಗ ಗೊತ್ತಾಗುತ್ತದೆ. ಸಾಯುವ ಮೊದಲು ಗೊತ್ತಾಗುವುದೇ ಇಲ್ಲ. ಕೆಲವರು ಸತ್ತಮೇಲೆಯೇ ಗೊತ್ತಾಗುವುದು. ಮತ್ತೊಂದು ಕಥೆಯನ್ನು ಹೇಳುತ್ತೇನೆ. ಹೆಂಡತಿ ಮಕ್ಕಳನ್ನು ನಿರ್ಗತಿಕರನ್ನಾಗಿ ಮಾಡಿ, ಸಾಲದ ಹೊರೆ ಹಾಕಿಕೊಂಡು ಸಾಯುವವರೂ ಇರುತ್ತಾರೆ. ನಾನು ಹೇಳುವುದು, ಇನ್ನು ಬಹಳ ಲೈಟಾಗಿ ನಾವು ನೋಡುವುದಕ್ಕಾಗುವುದಿಲ್ಲ. ಸಾರ್ವಜನಿಕರ ಜೀವನ

ಬಹಳ ಕಷ್ಟ ಇದೆ. Anyhow we have all come to this to swim in this. There is no question of looking back about it.

ಆದ್ದರಿಂದ ಇವತ್ತು ಇದನ್ನು ಬಹಳ ಸೂಕ್ಷ್ಮವಾಗಿ ಹೇಳುತ್ತಿದ್ದೇನೆ. ಇವತ್ತು ಕೆಲವು ಅಂಕಿಅಂಶಗಳನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಹೆಚ್ಚು ಕೊಡಲಿಕ್ಕೆ ಅಪೇಕ್ಷೆ ಪಡುವುದಿಲ್ಲ. Very small statistic, I would like to give. ಕಾಸ್ಟಿಂಗ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ಎಕ್ಸೈಸ್ ಡ್ಯೂಟೀಸ್ ಬಗ್ಗೆ ಕೂಡ ಈಗಾಗಲೇ ಹೇಳಿದ್ದೇನೆ. ನಾನು ರೆವಿನ್ಯೂ ರಿಯಲೈಸೇಷನ್ ವಿಚಾರ ಮಾತ್ರ ಸ್ವಲ್ಪ ಹೇಳಲಿಕ್ಕೆ ನಾನು ಅಪೇಕ್ಷೆಪಡುತ್ತೇನೆ. ಈಗ ರೆವಿನ್ಯೂ ರಿಯಲೈಸೇಷನ್ನಲ್ಲಿ ಏಪ್ರಿಲ್ನಿಂದ ಮಾರ್ಚ್, 1991-92ರಲ್ಲಿ 510.32 ಕೋಟಿ, ಎಲ್ಲಾ ಐಟಂ ಸೇರಿ. 1992-93ರಲ್ಲಿ 515.25 ಕೋಟಿ. ಬರೀ 5 ಕೋಟಿ ರೂಪಾಯಿ ಮಾತ್ರ ಜಾಸ್ತಿ. ಈಗ ಏಪ್ರಿಲ್ನಿಂದ ಜನವರಿ, ಇದೇ ಬ್ರೇಕ್ ಅಫ್ ಪೀರಿಯಡ್ನಲ್ಲಿ ನೋಡಿ. ಎಷ್ಟು ಇನ್ಕಮ್ ಎಂಬುದನ್ನು ನೋಡಿ. 1991-92ರಲ್ಲಿ 399.46 ಕೋಟಿ, 1992-93ರಲ್ಲಿ, 10 ತಿಂಗಳ ಅವಧಿಯಲ್ಲಿ 410.33 ಕೋಟಿ. ಈಗ 1993-94 with all these difficulties which has never been faced in the Excise Department or in Karnataka we have achieved 494.41 crores an increase from Rs. 410 crores i.e., about Rs. 84.08 crores, That is 20% increase. With all these difficulties, we could achieve. Of course, it will now step up.

ಈಗ ಜನವರಿ, ಮಾರ್ಚ್ ಇದರಲ್ಲಿ 701 ಕೋಟಿ ರೂಪಾಯಿ ಟಾರ್ಗೆಟ್ ಕೊಟ್ಟಿದ್ದೇವೆ. ನಾನು ಎರಡು ಸಾರಿ ರಿವ್ಯೂ ಮಾಡಿದ್ದೇನೆ, It will not be a surprise if I get Rs. 701 crores. It will not be a surprise with all your blessings.

ತಾವು ಹೇಳಿದ ಹಾಗೆ ಮುಂದೆ ಬರತಕ್ಕಂಥ ವರ್ಷ ಏನಿದೆ, ಆಗ ತಾವು ನೋಡಬಹುದು. 1992-93ರಲ್ಲಿ 515.25 ಕೋಟಿಯಿಂದ 701 ಕೋಟಿ ರೂಪಾಯಿಗೆ ರೀಚ್ ಆಗುತ್ತೇವೆಂದು ನಮಗೆ ಕಾನ್ಫಿಡೆನ್ಸ್ ಇದೆ. 17.6 ಪರ್ಸೆಂಟ್ ಇನ್ಫ್ಲೇಷನ್ ಇದ್ದಾಗ 5 ಕೋಟಿ ಇನ್ಕ್ರೀಸ್ ಆಗಿತ್ತು. ಆದರೆ ಈಗ 5.6 ಅಥವಾ 6.1 ಪರ್ಸೆಂಟ್ ಇನ್ಫ್ಲೇಷನ್ ಇರುವಾಗ ಎಷ್ಟು ಹೆಚ್ಚಾಗಿದೆ ಎಂಬುದನ್ನು ನೋಡಿ, ಇದು ಉತ್ತರ ಕುಮಾರನ ಪೌರುಷವಾ? ಅರ್ಜುನನ ಪೌರುಷವಾ? ಭೀಮನ ಪೌರುಷವಾ ಎಂದು ತಾವೇ ಹೇಳಬೇಕು. Can it be done without a major Surgery or it can be done by a simple surgery?

It was very difficult for us. It was a torture for me every day. It was a torture for the Excise Commissioner, torture for my Finance Commissioner, every day. Yes, he suffered. All of us uffered because ಅಂಥ ಒಂದು ದಾರಿಯನ್ನು ತುಳಿಯಬೇಕಾದಂಥ ಪರಿಸ್ಥಿತಿ ನಮಗೆ ಬಂತು. ಇವತ್ತು ನಾವು 494.41 ಕ್ರೋರ್ಸ್ as on today we have achieved it and to be achieveds figure is Rs. 207.26 crores. I think this can be achieved with all our efforts. Our people are working day in and day out.

ಬಹಳ ನಿಷ್ಠೂರವಾದ ಕೆಲಸ ಇದು. ವಿಪರೀತ ನಿಷ್ಠೂರವಾಗಿಬಿಟ್ಟಿದ್ದೇವೆ. ಜನತೆಯ ಹಿತದೃಷ್ಟಿಯಿಂದ ನನ್ನ ಪ್ಲಾನ್ 3025 ಕ್ರೋರ್ಸ್ ಕಂಪ್ಲೀಟ್ ಮಾಡಬೇಕೆನ್ನುವ ದೃಷ್ಟಿಯಿಂದ ಇದು ಮಾಡಬೇಕಾದ ಪರಿಸ್ಥಿತಿ ಬಂತು. ಬಹುಶಃ ಮಹಾಭಾರತದ ಉತ್ತರ ಕುಮಾರನಿಗೆ ಈ ಕೆಲಸ ಮಾಡಲಿಕ್ಕೆ ಸಾಧ್ಯವಿದ್ದರೆ ಬಹುಶಃ ಮಹಾಭಾರತದಲ್ಲಿ ಉತ್ತರ ಕುಮಾರನೇ ಹೀರೋ ಆಗುತ್ತಿದ್ದ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ,ಅಲ್ಲಿ ನಡೆದಿರತಕ್ಕಂಥ ಕೆಲವು ವ್ಯವಹಾರಗಳ ಬಗ್ಗೆ ನಾನು ಗಮನ ಸೆಳೆದಿದ್ದೆ. ಅದರ ಬಗ್ಗೆ ಚಕಾರ ಎತ್ತಲಿಲ್ಲ. ಏನು ಅವ್ಯವಹಾರ ನಡೆಯಿತು? ಏಕೆ ಬಿಟ್ಟರು? ಯಾವ ಅಧಿಕಾರಿಗಳು ಅವರು?

ಶ್ರೀ ಹೆಚ್. ಏಕಾಂತಯ್ಯ : ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಷಯವನ್ನು ಕೇಳುವುದಕ್ಕೆ ಬಯಸುತ್ತೇನೆ. ನಾನು ಎತ್ತಿದ್ದಂಥ ಆಕ್ಷೇಪಣೆಗಳಿಗೆ ಅವರು ತಮ್ಮದೇ ಆದಂಥ ರೀತಿಯಲ್ಲಿ ಸಮರ್ಥನೆ ಮಾಡಿಕೊಂಡಿದ್ದಾರೆ, ಅವುಗಳ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಪುನಃ ನಾನು ಹೋಗುವುದಿಲ್ಲ. ನೀತಿಯ ನಿರ್ಧಾರದಲ್ಲಿ ಅವರ ನಿರ್ಧಾರವೇ ಕೊನೆ ಎಂದು ನಮಗೆ ಗೊತ್ತಿದೆ. ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಬಹುದಾಗಿತ್ತು. ಅವರಿಗೆ ಯಾವುದೇ ತರಹದ ಮುಜುಗರ ಈಗ ಇಲ್ಲ. 1993ರ ಆಗಸ್ಟ್ 27ನೇ ತಾರೀಖು ಏನು ಮುಜುಗರ ತಮಗೆ ಇತ್ತು, ಆ ಮುಜುಗರ ಇವತ್ತು ಇಲ್ಲ. ಅದಕ್ಕೋಸ್ಕರ ನಾನು ಅವರಿಂದ ಬಯಸುವುದೇನೆಂದರೆ, ಮೊದಲು ಏನು ಆಧ್ಯಾದೇಶವನ್ನು ಮಾಡಿದಿರಿ; ಆವಾಗ ತಾವು ಏನು ವಿವರಣಾತ್ಮಕವಾದ ಹೇಳಿಕೆಯನ್ನು ಕೊಟ್ಟಿರಿ. ಆದರೆ ಎರಡನೇ ಸಾರಿ ಏನು ಅಧ್ಯಾದೇಶವನ್ನು ಹೊರಡಿಸಿದಿರಿ, ಅದಕ್ಕೆ ಬೇಕಾದಂಥ ವಿವರಣೆಯನ್ನು ಕೊಡಲಿಲ್ಲ. ನಾನು ಮತ್ತೊಂದು ಸಾರಿ ಹೇಳುತ್ತಿದ್ದೇನೆ, ಇವತ್ತು ತಮಗೆ ಮುಜುಗರ ಇಲ್ಲದೆ ಇದ್ದಾಗ ಯಾವ ಕಾರಣಕ್ಕೋಸ್ಕರ 1993 ಆಗಸ್ಟ್ 27ನೇ ತಾರೀಖು ಸದನದಲ್ಲಿ ಈ ವಿಧೇಯಕವನ್ನು ಮಂಡಿಸಿದಿರಿ? ಅದನ್ನು ವಿಧೇಯಕವನ್ನಾಗಿ ಮಾಡಿಕೊಂಡು ಜಾರಿ ಮಾಡಲಿಕ್ಕೆ ಏಕೆ ಸಾಧ್ಯವಾಗಲಿಲ್ಲ? ಅದರ ಅರ್ಥ ಏನೆಂದರೆ, ತಮಗೆ ತಮ್ಮದೇ ಆದಂಥ ಪರಿಸ್ಥಿತಿ ಇತ್ತು. ಈ ರಾಜ್ಯದ ಜನರಿಗೆ ಗೊತ್ತಾಗಬೇಕಾಗಿದೆ. 1993 ಆಗಸ್ಟ್ 27ನೇ ತಾರೀಖು ಏನು ವಿಧೇಯಕವನ್ನು ಮಂಡಿಸಿದ್ರಿ? ಅದನ್ನು ಜಾರಿ ಮಾಡಿಕೊಳ್ಳಲಾಗದಂಥೇ ವಿಧೇಯಕದ ರೂಪದಲ್ಲಿ ಶಾಸನವನ್ನು ತರಲಿಕ್ಕಾಗದಂಥದಕ್ಕೆ ಏನು ಅಡ್ಡಿ ಇತ್ತು? ಏತಕ್ಕೋಸ್ಕರ ಎರಡನೇ ಸಾರಿ ತಾವು ಆಧ್ಯಾದೇಶವನ್ನು ಹೊರಡಿಸಿ ಇವತ್ತಿನ ದಿವಸ ಈ ಕಾನೂನು ಮಾಡಿದ್ದೀರಿ ಎಂಬುದಕ್ಕೆ ತಮ್ಮಿಂದ ವಿವರಣೆಯನ್ನು ಬಯಸುತ್ತೇನೆಯೇ ಹೊರತಾಗಿ ಮತ್ತೇನೂ ಇಲ್ಲ. ಈ ರಾಜ್ಯದ ಜನರಿಗೆ ತಾವು ಹೇಳಬೇಕಾಗಿದೆ. ತಾವು ಏನೂ ಹೇಳದೆ ಮೊಗಮ್ಮಾಗಿ ಇರುವುದು ಪ್ರಯೋಜನವಿಲ್ಲ. ನನಗೆ ಯಾವ ಪ್ರಭಾವಲಯವಿಲ್ಲ. ತಮಗೂ ಇಲ್ಲವೆಂದು ಭಾವಿಸಿಕೊಳ್ಳುತ್ತೇನೆ. ತಾವು 1993 ಆಗಸ್ಟ್ 27ರಂದು ಏನು ಸುಗ್ರೀವಾಜ್ಞೆಯನ್ನು ತಂದು ಏತಕ್ಕೋಸ್ಕರ ಕಾನೂನು ಮಾಡಲಿಕ್ಕಾಗಲಿಲ್ಲ? ಆ ಕಾನೂನನ್ನು ಜಾರಿ ಮಾಡಲಾರದಂತೆ ಅದನ್ನು ಮುಂದಕ್ಕೆ ಹಾಕಿ, ಸದನ ಪ್ರೊರೋಗ್ ಆದ ಮೇಲೆ ಪುನಃ ಆಧ್ಯಾದೇಶವನ್ನು ತಂದಿರಿ. ಈ ನಡುವಿನ ಸರ್ಕಾರದ ನಡವಳಿಕೆಗೆ ರಾಜ್ಯದ ಜನರ ದೃಷ್ಟಿಯಿಂದ ತಾವು ವಿವರಣೆ ಕೊಡಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಕಾರಣವನ್ನು ಈಗಾಗಲೇ ಸಾಕಷ್ಟು ಹೇಳಿದ್ದೇನೆ. At one point of time, I really thought legally that I need not, since the right has already been extinguished, we may not require this law to continue to survive. That is why I said we did not bring it. That is the only reason which I have given.

1993ನೇ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು : ಪ್ರಶ್ನೆ ಏನೆಂದರೆ, 1993ನೇ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು : ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

ಖಂಡ 5 ಕ್ಕೆ ತಿದ್ದುಪಡಿ

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕದ 5ನೇ ಖಂಡಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That (i) in sub-clause (1), for the words, figures andd brackets" (Karnataka Ordinance 6 of 1993) is" the words, figures and brackets " (The Karnataka Ordinance 6 of 1993) and the Karnataka Excise (Amendment) (No.2) Ordinance, 1993, (Karnataka ordinance 10 of 1993) are" shall be substituted;

"(ii) in sub-clause (2), for the words "Said ordinance" the words "said Ordinances" Shall be substituted."

The question was proposed

ಶ್ರೀಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ, ಎಕ್ಸೈಸ್ ಆರ್ಡಿನೆನ್ಸ್ ನಂಬರ್ 6ನ್ನು ತಾವು ಆಗಲೇ ರಿಪೀಲ್ ಮಾಡಿದ್ದೀರಿ. ಇಲ್ಲಿ ಪುನಃ ರಿಪೀಲ್ ಮಾಡುತ್ತೇವೆ ಎಂಬ ಕ್ಲಾಸ್‌ನ್ನು ತಾವು ಹೇಳಿದ್ದೀರಿ, ಅದು ಅನಾವಶ್ಯಕ. ಅದಕ್ಕೆ ಬದಲಾಗಿ ತಾವು ನೇರವಾಗಿ ನಾನು ಮೊದಲೇ ಹೇಳಿದ ಹಾಗೆ "Karnataka Ordinance No.10/93 is repalced" is enough.

Sri M. Veerappa Moily : I agree.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1993ನೇ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ 5ನೇ ಖಂಡಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಅಂಗೀಕರಿಸುವುದು.

That "(i) in sub-clause (1), for the words, figures and brackets "(Karnataka ordinance 6 of 1993) is" the words, figures and brackets "(The Karnataka Ordinance 6 of 1993) and the Karnataka Excise (Amendment) (No.2) Ordinance,

1993, (Karnataka Ordinance 10 of 1993) are" shall be substituted;

"(ii) That in sub-clause (2), for the words "said Ordinance" the words "said Ordinances" shall be substituted."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯೊಂದಿಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ತಿದ್ದುಪಡಿಯಾದ 5ನೇ ಖಂಡ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ತಿದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 'ಮೊದಲನೆ ಖಂಡ ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ 1993ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1993ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(3)1993ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಅಬಕಾರಿ ಎರಡನೇ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.